ವಿಶ್ವವಾಣಿ

ವಿಶ್ವಾಸವೇ ವಿಶ್ವ



ಜಿ 7 ಶೃಂಗಸಭೆಯಲ್ಲಿ ಉಕ್ರೇನ್ ಅಧ್ಯಕ್ಷ ವೊಲೊದಿಮೀರ್ ಝುಲೆನ್ಸ್ಕಿ ಅವರನ್ನು ಭೇಟಿಯಾದ ಪ್ರಧಾನಿ ನರೇಂದ್ರ ಮೋದಿ.

ದಾರಿದೀಪೋಕ್ತಿ

ನಿಮಗೆ ಬಹಳ ಸ್ನೇಹಿತರು ಇರಬೇಕೆಂದೇನೂ ಇಲ್ಲ. ಇರುವ ನಾಲ್ವರು ಉತ್ತಮರಿದ್ದರೆ ಸಾಕು. ಸ್ನೇಹಿತರು ಎಷ್ಟಿದ್ದಾರೆ ಎಂಬುದಕ್ಕಿಂತ , ಇರುವ ಸ್ನೇಹಿತರು ಎಂಬುದು ಮುಖ್ಯ . ಈ ವಿಷಯದಲ್ಲಿ ಯಾವತ್ತೂ ಸಂಖ್ಯೆಗಿಂತ ಗುಣಮಟ್ಟಕ್ಕೆ ಮಹತ್ವ ನೀಡಬೇಕು.

ವಕ್ರತುಂಡೋಕ್ತಿ

ನಮ್ಮ ಮಾತನ್ನು ನಾವೇ ಕೇಳುವ ಒಂದು ಪ್ರಯೋಜನ ಅಂದ್ರೆ, ಕನಿಷ್ಠ ಯಾರೋ ಒಬ್ಬರು ಕೇಳುತ್ತಾರೆ ಎಂದುಕೊಳ್ಳಬಹುದು.

ಪುಟ ತೆರೆದಂತೆ...

ಕಲೆಯ ವಿರುದ್ಧ ರಾಜಕಾರಣ ಗೆಲುವು
ಅಭಿಮತ
ಶಿವಸುಬ್ರಹ್ಮಣ್ಯ ಕೆ.
ಸಂ.ಪುಟ | 6

ಅಭ್ಯಂಗ ಮಾಡಿ ಕೋವಿಡ್‌ನಿಂದ ಬಚಾವಾದೆ
ಸ್ವಾಸ್ಥ್ಯವೆಂಬ ಸಾಧನ
ಡಾ. ಸಾಧನಶ್ರೀ
ಸಂ.ಗಮ | 7

ಆ.30ರಿಂದ ಅಕ್ಕ ಸಮ್ಮೇಳನ ಆಯೋಜನೆ

ಬೆಂಗಳೂರು: ಆರು ವರ್ಷದ ಬಳಿಕ ಅಕ್ಕ ವಿಶ್ವ ಕನ್ನಡ ಸಮ್ಮೇಳನವನ್ನು ಆಯೋಜಿಸಲು ತೀರ್ಮಾನಿಸಲಾಗಿದ್ದು, ಆ.30ರಿಂದ ಸೆ.1ರವರೆಗೆ ಅಮೆರಿಕದ ವರ್ಜೀನಿಯಾದಲ್ಲಿ ನಡೆಯಲಿದೆ. ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಮೆರಿಕ ಕನ್ನಡ ಕೂಟಗಳ ಆಗರ(ಅಕ್ಕ) ದ ಅಧ್ಯಕ್ಷ ರವಿ ಬೋರೇಗೌಡ, ಆರು ವರ್ಷದ ಬಳಿಕ ಅಕ್ಕ ವಿಶ್ವ ಕನ್ನಡ ಸಮ್ಮೇಳನ ಅಮೆರಿಕದ ವರ್ಜೀನಿಯಾ ರಾಜ್ಯದ ರಿಚ್ಮಂಡ್ ನಗರದಲ್ಲಿ ನಡೆಯಲಿದೆ. 42 ಅಮೆರಿಕದ ಕನ್ನಡ ಸಂಘಗಳು ಸೇರಿ ಈ ಕಾರ್ಯಕ್ರಮವನ್ನು ಆಯೋಜಿಸುತ್ತಿವೆ ಎಂದು ತಿಳಿಸಿದರು. ಸಮ್ಮೇಳನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು, ವಿವಿಧ ಸ್ಪರ್ಧೆಗಳು, ಫ್ಯಾಶನ್ ಶೋ, ಸಾಹಿತ್ಯ ಗೋಷ್ಠಿ, ಬಿಸಿನೆಸ್ ಫೋರಂ, ನಾಡಿನ ವಿಶಿಷ್ಟ ಖಾದ್ಯಗಳ ಭೋಜನ, ವಿಜಯ್ ಪ್ರಕಾಶ್, ರಾಜೇಶ್ ಕೃಷ್ಣನ್ ಮುಂತಾದ ಕಲಾವಿದರಿಂದ ಸಂಗೀತ ಕಾರ್ಯಕ್ರಮ, ನಟ ಪುನೀತ್ ರಾಜ್ ಕುಮಾರ್ ಅವರಿಗೆ ನಮನ ಸಲ್ಲಿಸುವ ಸಂಗೀತ ಸಂಜೆ ನಡೆಯಲಿದೆ. ವಿವರಪುಟ → 4

ಕುವೈತ್‌ನಿಂದ 45 ಮೃತದೇಹಗಳ ಏರ್‌ಲಿಫ್ಟ್

ದೆಹಲಿ: ಮಂಗಾಫ್ ನಗರದಲ್ಲಿ ನಡೆದ ಭೀಕರ ಅಗ್ನಿ ದುರಂತದಲ್ಲಿ ಸಾವನ್ನಪ್ಪಿದ ಪ್ರಕರಣದಲ್ಲಿ ಒಬ್ಬ ಕನ್ನಡಿಗ ಸೇರಿದಂತೆ 45 ಭಾರತೀಯರ ಮೃತದೇಹಗಳನ್ನು ದೇಶಕ್ಕೆ ತರಲಾಗಿದೆ. ಭಾರತೀಯ ವಾಯುಸೇನೆ ವಿಮಾನದ ಮೂಲಕ ಪಾರ್ಥಿವ ಶರೀರಗಳನ್ನು ಹೊತ್ತು ಕೊಚ್ಚಿಯಲ್ಲಿ ಲ್ಯಾಂಡ್ ಆಗಿದೆ. ಮೃತರಾದ 45 ಭಾರತೀಯಲ್ಲಿ 23 ಮಂದಿ ಕೇರಳ ಮೂಲದವರಾಗಿದ್ದು, ತಮಿಳುನಾಡಿನ 7, ಆಂಧ್ರಪ್ರದೇಶ ಮತ್ತು ಉತ್ತರಪ್ರದೇಶದ ಮೂವರು, ಒಡಿಶಾದ ಇಬ್ಬರು ಹಾಗೂ ಬಿಹಾರ್, ಪಂಜಾಬ್, ಕರ್ನಾಟಕ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಜಾರ್ಖಂಡ ಮತ್ತು ಹರಿಯಾಣದ ತಲಾ ಒಬ್ಬರು. ರಾಜ್ಯದ ಕಲಬುರಗಿ ಜಿಲ್ಲೆಯ ಓರ್ವ ಕುವೈತ್‌ನಲ್ಲಿ ಸಾವನ್ನಪ್ಪಿದ್ದು ಆಂಬ್ಯುಲೆನ್ಸ್ ಮೂಲಕ ಕೊಚ್ಚಿಯಿಂದ ಪಾರ್ಥಿವ ಶರೀರ ಸ್ವಗ್ರಾಮ ತಲುಪಿದೆ. ಕೇರಳಾ ಮೂಲದ ವ್ಯಾಪಾರಿಯ ಮಾಲೀಕತ್ವದ ಕಟ್ಟಡದಲ್ಲಿ ಈ ಅಗ್ನಿ ದುರಂತ ನಡೆದಿದ್ದು, ಪೊಲೀಸರು ಮಾಲೀಕನನ್ನ ಬಂಧಿಸಿ ವಿಚಾರಣೆಗೆ ಒಳಪಡಿಸಿದ್ದಾರೆ. ಬೆಂಕಿ ಹೊತ್ತಿಕೊಳ್ಳಲು ನಿಖರ ಕಾರಣ ಇನ್ನೂ ತಿಳಿದು ಬಂದಿಲ್ಲ. 195 ಕಾರ್ಮಿಕರು ವಾಸವಿದ್ದ ಬಹು ಮಹಡಿ ಕಟ್ಟಡ ಸುಟ್ಟು ಕರಕಲಾಗಿದ್ದು 50 ಕ್ಕೂ ಅಧಿಕ ಮಂದಿ ಘಟನೆಯಲ್ಲಿ ಗಾಯಗೊಂಡಿದ್ದಾರೆ.

ಭಾರತ ಸೇನೆಯ ಬತ್ತಳಿಕೆಯಲ್ಲಿ ನಾಗಾಸ್ತ್ರ

ದೆಹಲಿ: ದೇಶೀಯವಾಗಿ ತಯಾರಿಸಲಾದ ಶಕ್ತಿಯುತ ಆಯುಧ 'ನಾಗಾಸ್ತ್ರ-1' ಭಾರತೀಯ ಸೇನೆಯ ಬತ್ತಳಿಕೆ ಸೇರಿದೆ. ಉಗ್ರರ ಅಡಗು ತಾಣಗಳ ಮೇಲೆ ಗುರಿಯಿಟ್ಟು ದಾಳಿ ನಡೆಸಬಲ್ಲ ಸಾಮರ್ಥ್ಯದ ಈ ಯುದ್ಧಾಸ್ತ್ರ ಭಾರತೀಯ ಸೇನೆಯ ಬಲ ಹೆಚ್ಚಿಸಿದೆ. ಇದೇ ಮೊದಲ ಬಾರಿಗೆ ಈ ಶ್ರೇಣಿಯ ಡ್ರೋನ್‌ಗಳನ್ನು ಭಾರತದಲ್ಲಿ ತಯಾರಿಸಲಾಗಿದ್ದು, ನಾಗ್ಪುರದಲ್ಲಿರುವ ಸೋಲಾರ್ ಇಂಡಸ್ಟ್ರೀಸ್ ಸಂಸ್ಥೆಗೆ ಸೇರಿದ ಎಕನಾಮಿಕ್ ಎಕ್ಸ್‌ಪ್ಲೋಸಿವ್‌ನಲ್ಲಿ ಈ ಪ್ರಬಲ ಡ್ರೋನ್‌ಗಳನ್ನು ತಯಾರಿಸಲಾಗಿದೆ. 480 ನಾಗಾಸ್ತ್ರಗಳಿಗೆ ಭಾರತೀಯ ಸೇನೆ ಬೇಡಿಕೆ ಇಟ್ಟಿದ್ದು ಮೊದಲ ಹಂತದಲ್ಲಿ 120 ಡ್ರೋನ್‌ಗಳು ಸೇನೆಯ ಕೈ ಸೇರಿದೆ. ಹಗುರವಾದ ಹಾಗೂ 1 ಕೆಜಿ ಸ್ಫೋಟಕಗಳನ್ನು ಹೊರಬಲ್ಲ ಈ ಡ್ರೋನ್‌ಗಳು 2 ಮೀಟರ್ ಅಂತರದಲ್ಲಿ ಗುರಿಯಿಟ್ಟು ದಾಳಿ ನಡೆಸುವ ಸಾಮರ್ಥ್ಯ ಹೊಂದಿವೆ. ಜತೆಗೆ ಹಗಲು ಹಾಗೂ ರಾತ್ರಿ ಸಮಯದಲ್ಲೂ ಈ ಡ್ರೋನ್‌ಗಳು ಕಾರ್ಯಾಚರಣೆ ನಡೆಸಬಲ್ಲವು. ಈ ಡ್ರೋನ್‌ಗಳು ರಕ್ಷಣಾ ವಲಯದಲ್ಲಿ ಆತ್ಮನಿರ್ಭರ ಭಾರತ ಮತ್ತು ಮೇಕ್ ಇನ್ ಇಂಡಿಯಾ ಯೋಜನೆಗಳಿಗೆ ಪುಷ್ಟಿ ನೀಡಿವೆ.

ಫನ್‌ತರಂಗ

- ರಘುಪತಿ ಶೃಂಗೇರಿ -



ಪೋಕ್ಸೋ ಪ್ರಕರಣದಡಿ ಬಂಧನಕ್ಕೆ ಹೈಕೋರ್ಟ್ ತಡೆ, 17ರಂದು ವಿಚಾರಣೆಗೆ ಹಾಜರಾಗಲು ಆದೇಶ

ಬಿಎಸ್‌ವೈಗೆ ರಿಲೀಫ್



ಬಂಧನ ವಿನಾಯಿತಿಗೆ ಕೋರ್ಟ್ ಪರಿಗಣಿಸಿದ ಅಂಶಗಳು

- ಬಿಎಸ್ ಯಡಿಯೂರಪ್ಪ ಅವರಿಗೆ ವಯಸ್ಸಾಗಿದೆ
- ಸಹಜವಾಗಿಯೇ ವಯೋಸಹಜ ಸಮಸ್ಯೆಗಳಿರುತ್ತವೆ
- ವಿಚಾರಣೆಗೆ ಹಾಜರಾಗದೇ ತಲೆಮರೆಸಿಕೊಳ್ಳುವ ಸಾಧ್ಯತೆ ಇಲ್ಲ

ಪೊಲೀಸರು ನೀಡಿದ ಕಾರಣ

- ಪ್ರಕರಣಕ್ಕೆ ಸಂಬಂಧಿಸಿ ಸುಟ್ಟ ಮೊಬೈಲ್ ಚಿಪ್‌ನಲ್ಲಿದ್ದ ಡಾಟಾ ತೆಗೆಯಲು ಗುಜರಾತಿನ ಎಫ್‌ಎಸ್‌ಎಲ್‌ಗೆ ಕಳುಹಿಸಲಾಯಿತು. ಮೇ 13ರಂದು ಎಫ್‌ಎಸ್‌ಎಲ್ ವರದಿ ಬಂದಿದೆ.
- ಧ್ವನಿ ಪರೀಕ್ಷೆಗೆ ಬೆಂಗಳೂರು ಎಫ್‌ಎಸ್‌ಎಲ್‌ಗೆ ಕಳುಹಿಸಲಾಗಿದೆ. ಹೆಚ್ಚಿನ ವಿಚಾರಣೆ ನಡೆಸಬೇಕಾಗಿದೆ.
- ಜೂನ್ 12ರಂದು ಹಾಜರಾಗಲು ನೋಟಿಸ್. ಮೊಬೈಲ್ ನಲ್ಲಿದ್ದ ವಿಡಿಯೋ, ಧ್ವನಿ ಪರೀಕ್ಷೆ ನಂತರ ನೋಟಿಸ್ ನೀಡಲಾಯಿತು. ಹಾಜರಾಗದ ಕಾರಣ ವಾರಂಟ್.

ಸರಕಾರದ ಪರ ವಕೀಲರ ವಾದ

- ನಾವು ಎರಡು ಬಾರಿ ನೋಟೀಸ್ ಕೊಟ್ಟಿದ್ದೇವೆ. ಆದರೂ ಆರೋಪಿ ವಿಚಾರಣೆಗೆ ಬಂದಿಲ್ಲ.
- ನಾವು ಆರೋಪಿಯ ಧ್ವನಿ ಸ್ಯಾಂಪಲ್ ಪಡೆದು ವರದಿ ಪಡೆದಿದ್ದೇವೆ. ವಿಡಿಯೊ ಸಾಕ್ಷಿಯ ಎಫ್‌ಎಸ್‌ಎಲ್ ವರದಿ ಸಹ ಪಡೆದಿದ್ದೇವೆ. ವಿಚಾರಣೆಗೆ ಹಾಜರಾಗಲು ನಾವು ನೋಟೀಸ್ ಕೊಟ್ಟ ಬಳಿಕ ಆರೋಪಿ ದೆಹಲಿಗೆ ಟಿಕೆಟ್ ಬುಕ್ ಮಾಡಿದ್ದಾರೆ.
- ಆರೋಪಿ ಕರೆಯಿಸಿ 2 ಲಕ್ಷ ರುಪಾಯಿ ಹಣ ನೀಡಿ, ಆಕೆ ಬಳಿಯಿದ್ದ ವಿಡಿಯೊ ಡಿಲೀಟ್ ಮಾಡಲು ಹೇಳಿದ್ದಾರೆ. ಈ ಪ್ರಕರಣದಲ್ಲಿ ಆರೋಪಿ ಸಾಕ್ಷಿ ನಾಶಕ್ಕೆ ಪ್ರಯತ್ನಿಸಿದ್ದಾರೆ. ಆರೋಪಿಗಳು ಸಂತ್ರಸ್ತೆಯ ಮೇಲೆ ಒತ್ತಡ ಬೀರಿದ್ದಾರೆ.

ಬಿಎಸ್‌ವೈ ಪರ ವಕೀಲರ ವಾದ

- ಲೈಂಗಿಕ ದೌರ್ಜನ್ಯ ಪ್ರಕರಣ ಜಾಮೀನು ಸಹಿತ ಪ್ರಕರಣ. ಇದರಲ್ಲಿ ಬಂಧನದ ಅನಿವಾರ್ಯತೆ ಇಲ್ಲ. 41(0) ಅಡಿಯಲ್ಲಿ ನೋಟಿಸ್ ನೀಡಿದೆ. 7 ವರ್ಷದ ಶಿಕ್ಷೆ ಇರುವ ಪ್ರಕರಣಕ್ಕೆ ಬಂಧನ ಮಾಡಬಾರದು ಎಂದು ಸುಪ್ರೀಂ ಕೋರ್ಟ್ ಆದೇಶದಲ್ಲಿದೆ.
- ಕಮಿಷನ್ ಆರೋಪ ಸಂಬಂಧ ರಾಜ್ಯ ಬಿಜೆಪಿ ದಾಖಲಿಸಿದ ಮಾನನಷ್ಟ ಪ್ರಕರಣದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕೋರ್ಟ್ ಮುಂದೆ ಬಂದಿದ್ದರು. ಇದಕ್ಕೆ ಪ್ರತಿಯಾಗಿ ಮಾಜಿ ಸಿಎಂ (ಬಿಎಸ್‌ವೈ) ಬಂಧನಕ್ಕೆ ಮುಂದಾಗಿದ್ದಾರೆ. ಕಾಂಗ್ರೆಸ್ ನಾಯಕ ಉಗ್ರಪ್ಪ ಮೇಲೆ ಪ್ರಕರಣ ದಾಖಲಾಗಿಲ್ಲ. ತನಿಖೆಯೂ ಇಲ್ಲ.
- ಉದ್ದೇಶಪೂರ್ವಕವಾಗಿ ಮ್ಯಾಜಿಸ್ಟ್ರೇಟ್ ಕೋರ್ಟ್ ಮುಂದೆ ತಲೆಮರೆಸಿಕೊಂಡಿದ್ದಾರೆಂದು ಸುಳ್ಳು ಹೇಳಿಕೆ ನೀಡುತ್ತಾರೆ.

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಅಪ್ರಾಪ್ತ ವಯಸ್ಸಿನ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಲ್ಲಿ ಬಂಧನದ ಭೀತಿ ಎದುರಿಸುತ್ತಿದ್ದ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರನ್ನು ಬಂಧಿಸದಂತೆ ಹೈಕೋರ್ಟ್ ಆದೇಶಿದೆ.

ನಿರೀಕ್ಷಣಾ ಜಾಮೀನು ಕೋರಿ ಬಿ.ಎಸ್ .ಯಡಿಯೂರಪ್ಪ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ನ್ಯಾಯಪೀಠ ಮುಂದಿನ ವಿಚಾರಣೆ ವರೆಗೂ ಬಂಧಿಸದಂತೆ ಆದೇಶಿದೆ. ಅಲ್ಲದೆ, ಜೂನ್ 17ರಂದು ಪೊಲೀಸ್ ವಿಚಾರಣೆಗೆ ಹಾಜರಾಗಲು ಬಿಎಸ್‌ವೈ ಅವರಿಗೆ ನ್ಯಾಯಾಲಯ ಸೂಚನೆ ನೀಡಿದೆ. ಬಂಧನ ಭೀತಿಯಲ್ಲಿದ್ದ ಯಡಿಯೂರಪ್ಪ ಅವರಿಗೆ ಈ ಆದೇಶ ರಿಲೀಫ್ ನೀಡಿದೆ. ಅವರ ಪಕ್ಷವೂ ಸದ್ಯಕ್ಕೆ ಮುಜುಗರದಿಂದ ಪಾರಾಗಿದೆ.

ಪೋಕ್ಸೊ ಪ್ರಕರಣದಡಿ ದಾಖಲಾದ ಪ್ರಕರಣ ಸಂಬಂಧ ಯಡಿಯೂರಪ್ಪ ಅವರನ್ನು ಬಂಧಿಸಲು ಸಿದ್ಧತೆ ನಡೆಸಿಕೊಂಡಿದ್ದ ಪೊಲೀಸರು ಜಾಮೀನುರಹಿತ ವಾರಂಟ್ ಪಡೆದುಕೊಂಡಿದ್ದರು. ಯಡಿಯೂರಪ್ಪ ಅವರು ದಿಲ್ಲಿಯಲ್ಲಿಯೇ ಉಳಿದುಕೊಂಡು ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ವಿಚಾರಣೆಯ ವೇಳೆ ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ಅವರ ಏಕಸದಸ್ಯ ಪೀಠ ಪೊಲೀಸರ ಕ್ರಮದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದೆ. 'ಒಬ್ಬ ಮಾಜಿ ಮುಖ್ಯಮಂತ್ರಿಯನ್ನೇ ಈ ರೀತಿ ನಡೆಸಿಕೊಂಡರೆ, ಸಾಮಾನ್ಯ ಜನರ ಪಾಡೇನು' ಎಂದು ಕೋರ್ಟ್ ಕಳವಳ ವ್ಯಕ್ತಪಡಿಸಿದೆ.

ಸಿಐಡಿ ಪರ ವಾದ ಮಂಡಿಸಿದ ಅಡ್ವೊಕೇಟ್ ಜನರಲ್ (ಎಜಿ) ಶಶಿಕಿರಣ್ ಶೆಟ್ಟಿ ಅವರು, ಜೂ. 11ರಂದು ಬೆಳಗ್ಗೆ ಯಡಿಯೂರಪ್ಪ ಅವರಿಗೆ ಸಿಐಡಿ ಅಧಿಕಾರಿಗಳು ನೋಟಿಸ್ ಜಾರಿ ಮಾಡಿದ್ದಾರೆ. ಜೂ. 12ರಂದು ವಿಚಾರಣೆಗೆ ಹಾಜರಾಗಬೇಕು ಎಂದು ನೋಟಿಸ್ ನೀಡಿದ್ದಾರೆ. ಹೀಗಿದ್ದರೂ, ಯಡಿಯೂರಪ್ಪ ಅವರು ಸಂಜೆಗೆ ವಿಮಾನದ ಟಿಕೆಟ್ ಬುಕ್ ಮಾಡಿಕೊಂಡು ದೆಹಲಿಗೆ ತೆರಳಿದ್ದಾರೆ ಎಂದು ತಿಳಿಸಿದರು.

ಈ ವಾದವನ್ನು ಒಪ್ಪದ ನ್ಯಾಯಾಲಯವು, ಬಿ.ಎಸ್. ಯಡಿಯೂರಪ್ಪ ಅವರು ಜೂ. 12ರ ಬದಲು, ಜೂ.17ರಂದು ತನಿಖಾಧಿಕಾರಿ ಎದುರು ವಿಚಾರಣೆಗೆ ಹಾಜರಾಗುವುದಾಗಿ ತಿಳಿಸಿದ್ದಾರೆ. → 4

ಬಿ.ಎಸ್ .ಯಡಿಯೂರಪ್ಪ ಅವರ ಮೇಲಿನ ಕರುನಾಡ ಜನರ ಆಶೀರ್ವಾದ, ಕೋಟಿ ಹೃದಯಗಳ ಪ್ರಾರ್ಥನೆ ನ್ಯಾಯ ದೇಗುಲದಲಿ ಅನಾವರಣಗೊಂಡಿದೆ. ಷಡ್ಯಂತ್ರ, ಪಿತೂರಿ ರಾಜಕಾರಣ ಯಡಿಯೂರಪ್ಪ ಅವರ ಹಿಂಬಾಲಿಸಿಕೊಂಡು ಬರುತ್ತಲೇ ಇದೆ, ಎದೆಗುಂದದ ಅವರು ನ್ಯಾಯದ ಹಾದಿಯಲ್ಲಿ ಷಡ್ಯಂತ್ರಗಳನ್ನು ಜಯಿಸಿದ್ದಾರೆ.

-ಬಿ.ವೈ.ವಿಜಯೇಂದ್ರ ಬಿಜೆಪಿ ರಾಜ್ಯಾಧ್ಯಕ್ಷ

ಮತ್ತಷ್ಟು ಸಾಕ್ಷ್ಯ ದರ್ಶನ್ ಲಾಕ್

ಬಂಧಿತ ಆರೋಪಿಗಳ ಸಂಖ್ಯೆ 18ಕ್ಕೆ ಏರಿಕೆ, ಅಪಹರಣ ದೃಶ್ಯ ಸಿಸಿಟಿವಿಯಲ್ಲಿ ಸೆರೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಟ ದರ್ಶನ್ ಮತ್ತು ಗ್ಯಾಂಗ್ ವಿರುದ್ಧ ಕೇಳಿ ಬರುತ್ತಿರುವ ಕೊಲೆ ಆರೋಪದಲ್ಲಿ ಪೊಲೀಸರಿಗೆ ಮತ್ತಷ್ಟು ಸಾಕ್ಷ್ಯಗಳು ದೊರೆತಿದ್ದು , ಬೆಳ್ಳಿತೆರೆಯಲ್ಲಿ ನಾಯಕನಾಗಿ ಮೆರೆದ ನಟ ಜೈಲು ಸೇರುವುದು ಬಹುತೇಕ ಖಚಿತವಾಗಿದೆ.ಇದೇ ವೇಳೆ ಪ್ರಕರಣ ಸಂಬಂಧ ಇನ್ನೂ ಐವರನ್ನು ಬಂಧಿಸಲಾಗಿದ್ದು, ಬಂಧಿತರ ಸಂಖ್ಯೆ 18ಕ್ಕೆ ಏರಿದೆ.

ಗೆಳತಿ ಪವಿತ್ರಾ ಗೌಡಗೆ ಕಳುಹಿಸಿದ್ದ ಎನ್ನಲಾದ ಅಶ್ಲೀಲ ಸಂದೇಶದಿಂದ ರೊಚ್ಚಿಗೆದ್ದ ದರ್ಶನ್, ರೇಣುಕಾಸ್ವಾಮಿಯನ್ನು ಚಿತ್ರದುರ್ಗದಿಂದ ಪಟ್ಟಣಗೆರೆಗೆ ಕರೆಸಿಕೊಂಡು ಮಾರಣಾಂತಿಕ ಹಲ್ಲೆ ನಡೆಸಿದ ಪ್ರಕರಣ ಸಂಬಂಧ ತನಿಖೆ ನಡೆಸುತ್ತಿರುವ ಪೊಲೀಸರಿಗೆ ಹಲವು ಸಿಸಿಟಿವಿ ಸಾಕ್ಷ್ಯಗಳು ದೊರೆತಿವೆ. ಇದರ ಆಧಾರದ ಮೇಲೆ ದರ್ಶನ್ ಮತ್ತು ತಂಡವನ್ನು ಪ್ರಶ್ನಿಸಲಾಗುತ್ತಿದ್ದು, ಕೊಲೆ ಮತ್ತು ಸಾಕ್ಷ್ಯ ನಾಶಕ್ಕೆ ಯತ್ನಿಸಿದ ಬಗ್ಗೆ ಮತ್ತಷ್ಟು ಸಾಕ್ಷ್ಯ ದೊರೆತಿವೆ.

ಹತ್ಯೆಗೆ ಸಹಕರಿಸಿದ ಹಾಗೂ ಸಾಕ್ಷ್ಯನಾಶಪಡಿಸಿದ ಆರೋಪದಲ್ಲಿ ಶವ ಸಾಗಿಸಿದ್ದ ಸ್ಕಾರ್ಪಿಯೋ ಕಾರಿನ ಮಾಲೀಕ ಪುನೀತ್ ಸೇರಿ ಐವರನ್ನು ಶುಕ್ರವಾರ ಬಂಧಿಸಲಾಗಿದೆ. ಪುನೀತ್ ಮತ್ತು ಹೇಮಂತ್‌ನನ್ನು ಬೆಂಗಳೂರು ಪೊಲೀಸರರು ಬಂಧಿಸಿದರೆ ಪ್ರಕರಣದ 6, 7 ಮತ್ತು 8ನೇ ಆರೋಪಿಗಳಾದ ಜಗದೀಶ್, ಅನುಕುಮಾರ್, ರವಿ ಚಿತ್ರದುರ್ಗದಲ್ಲಿ ಪೊಲೀಸರಿಗೆ ಶರಣಾಗಿದ್ದಾರೆ. → 4

ಆರೋಪಿ ತಂದೆ ಸಾವು

ಚಿತ್ರದುರ್ಗ ಮೂಲದ ಆರೋಪಿ ಅನುಕುಮಾರ್ ಬಂಧನದಿಂದ ಆತಂಕಗೊಂಡ ಆರೋಪಿ ತಂದೆ ಚಂದ್ರಣ್ಣ ಹೃದಯಾಘಾತದಿಂದ ಮೃತಪಟ್ಟಿದ್ದಾರೆ. ಚಿತ್ರದುರ್ಗದ ಸಿಹಿನೀರು ಹೊಂಡ ರಸ್ತೆಯ ಬಳಿಯಿರುವ ಮನೆ ಬಳಿ ಏಕಾಏಕಿ ಕುಸಿದು ಬಿದ್ದ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಮಗ ಅನು ಬಂಧನದಿಂದ ತಂದೆ ಖಿನ್ನತೆಗೆ ಒಳಗಾಗಿದ್ದರು.

ಚುನಾವಣೆ ಕಣಕ್ಕಿಳಿಯಲು ಸಜ್ಜಾಗಿದ್ದರೇ ನಟ ದರ್ಶನ್?

ಚನ್ನಪಟ್ಟಣ ಉಪಚುನಾವಣೆಯಲ್ಲಿ ಕಣಕ್ಕಿಳಿಸಲು ಡಿಕೆಶಿ ಸಹೋದರರು ಯೋಜನೆ ರೂಪಿಸಿದ್ದರು ಎಂದು ಮಾಜಿ ಸಚಿವ ಸಿ.ಪಿ ಯೋಗೇಶ್ವರ್ ಹೇಳಿದ್ದಾರೆ. ಕಾಂಗ್ರೆಸ್‌ನಿಂದ ಅಚ್ಚರಿ ಅಭ್ಯರ್ಥಿ ಹಾಕುತ್ತೇವೆ ಎಂದಿದ್ದ ಡಿ.ಕೆ ಸುರೇಶ್ ಹೇಳಿಕೆ ಕುರಿತು ಮಾತನಾಡಿದ ಅವರು, ಕಾಂಗ್ರೆಸ್‌ನವರ ಅಚ್ಚರಿ ಅಭ್ಯರ್ಥಿ ಇದೀಗ ಜೈಲುಪಾಲಾಗಿದ್ದಾರೆ. ಆ ವ್ಯಕ್ತಿ ಯಾರು ಅಂತ ನೀವೇ ಊಹೆ ಮಾಡಿಕೊಳ್ಳಿ ಎಂದು ಹೇಳುವ ಮೂಲಕ ಪರೋಕ್ಷವಾಗಿ ದರ್ಶನ್ ಸ್ಪರ್ಧೆಗೆ ಬಯಸಿದ್ದರು ಎನ್ನುವ ಸುಳಿವು ನೀಡಿದ್ದಾರೆ.

ಪವನ್‌ಗೆ ಡಿಸಿಎಂ ಪಟ್ಟ

25 ಸಚಿವರು ಪ್ರಮಾಣ ಸ್ವೀಕಾರ | ಖಾತೆ ಹಂಚಿಕೆ



ಅಮರಾವತಿ: ವಿಧಾನಸಭಾ ಹಾಗೂ ಲೋಕಸಭಾ ಚುನಾವಣೆಯಲ್ಲಿ ಅಭೂತಪೂರ್ವ ಗೆಲುವಿನ ಬಳಿಕ ಜನಸೇನಾ ನಾಯಕ ಪವನ್ ಕಲ್ಯಾಣ್‌ಗೆ ಡಿಸಿಎಂ ಹುದ್ದೆ ಒಲಿದು ಬಂದಿದೆ.

ಆಂಧ್ರಪ್ರದೇಶದ ಉಪಮುಖ್ಯಮಂತ್ರಿಯಾಗಿ ಪವನ್ ಕಲ್ಯಾಣ್ ಶುಕ್ರವಾರ ಅಧಿಕಾರ ಸ್ವೀಕರಿಸಿದ್ದಾರೆ. ಬುಧವಾರ ಚಂದ್ರಬಾಬು ನಾಯ್ಡು ಎನ್‌ಡಿಎ ಸಿಎಂ ಆಗಿ ಅಧಿಕಾರ ಸ್ವೀಕರಿಸಿದ್ದಾರೆ, ಜತೆಗೆ 25 ಸಚಿವರು ಪ್ರಮಾಣ ವಚನ ಸ್ವೀಕಾರ ಮಾಡಿದ್ದು ಶುಕ್ರವಾರ ಸಿಎಂ ಖಾತೆ ಹಂಚಿಕೆ ಕೂಡ ಮಾಡಿದ್ದಾರೆ.

ಪವನ್ ಕಲ್ಯಾಣ್‌ಗೆ ಪಂಚಾಯತ್ ರಾಜ್, ಗ್ರಾಮೀಣಾಭಿವೃದ್ಧಿ ಮತ್ತು ಅರಣ್ಯ ಖಾತೆಯನ್ನು ಹಂಚಿಕೆ ಮಾಡಲಾಗಿದ್ದು ಜತೆಗೆ ಡಿಸಿಎಂ ಜವಾಬ್ದಾರಿ ಕೂಡ ಹೆಗಲೇರಿದೆ. ವಿಧಾನಸಭಾ ಚುನಾವಣೆಯಲ್ಲಿ ತೆಲುಗು ದೇಶಂ, ಜನಸೇನಾ ಹಾಗೂ ಬಿಜೆಪಿ ಒಕ್ಕೂಟ ಭರ್ಜರಿ ಗೆಲುವು ಸಾಧಿಸಿದ್ದು ಕೇಂದ್ರದಲ್ಲೂ ಪ್ರಧಾನಿ ಮೋದಿಗೆ ಬೆಂಬಲವಾಗಿ ಟಿಡಿಪಿ, ಜನಸೇನಾ ನಿಂತಿದೆ. ಸರಕಾರ ರಚನೆ ಚರ್ಚೆ ಆರಂಭದಿಂದಲೂ ಜನಸೇನಾ ನಾಯಕನಿಗೆ ಡಿಸಿಎಂ ಪಟ್ಟದ ನಿರೀಕ್ಷೆ ಇತ್ತು. ಶುಕ್ರವಾರ ಅಧಿಕೃತ ಘೋಷಣೆಯಾಗಿದೆ.

ಜೂ.26ಕ್ಕೆ ಲೋಕಸಭಾ ಸ್ಪೀಕರ್ ಎಲೆಕ್ಷನ್

ಜೆಡಿಯು, ಟಿಡಿಪಿಗೆ ಆದ್ಯತೆಗೆ ಒತ್ತಾಯ

ನವದೆಹಲಿ: 18ನೇ ಸಂಸತ್ತಿನ ಅಧಿವೇಶನ ಜೂ.24ರಿಂದ ನಡೆಯಲಿದ್ದು, ಜೂ.26ರಂದು ಲೋಕಸಭಾಧ್ಯಕ್ಷರ ಹುದ್ದೆಗೆ ಚುನಾವಣೆ ನಡೆಯಲಿದೆ. ಸಾರ್ವತ್ರಿಕ ಚುನಾವಣೆ ನಂತರ ಹೊಸ ಸಂಸದರಿಗೆ ಇದು ಮೊದಲ ಅಧಿವೇಶನವಾಗಿದೆ. ಈವರೆಗೆ ಸ್ಪೀಕರ್ ಆಗಿದ್ದ ಓಂ ಬಿರ್ಲಾರನ್ನು ಬಿಜೆಪಿ ಉಳಿಸಿಕೊಳ್ಳುವ ಸಾಧ್ಯತೆಯಿದೆ. ಆದರೆ ಸಮ್ಮಿಶ್ರ ಸರ್ಕಾರದಲ್ಲಿ ಪಾಲುದಾರರಾಗಿರುವ ತೆಲುಗು ದೇಶಂ ಮತ್ತು ಜೆಡಿಯು ಪಕ್ಷಗಳಿಗೆ ಹೊಸ ಸ್ಪೀಕರ್ ಸ್ಥಾನ ನೀಡಬೇಕೆಂಬುದು ಪ್ರತಿಪಕ್ಷಗಳ ಒತ್ತಾಯವಾಗಿದೆ.

ಇನ್ನೊಂದು ಮೂಲದ ಪ್ರಕಾರ, ತೆಲುಗು ದೇಶಂ ಸ್ಥಾಪಕ ಮತ್ತು ತೆಲುಗಿನ ಮೇರುನಟ ಎನ್.ಟಿ ರಾಮರಾವ್‌ರ ಪುತ್ರಿ ಪುರಂದೇಶ್ವರಿಗೆ ಸ್ಪೀಕರ್ ಹುದ್ದೆ ನೀಡಲು ಬಿಜೆಪಿ ಚಿಂತನೆ ನಡೆಸಿದೆ ಎನ್ನಲಾಗಿದೆ. ಅಲ್ಲದೆ, ಪುರಂದೇಶ್ವರಿ ಆಯ್ಕೆಗೆ ಆಂಧ್ರ ಸಿಎಂ ಚಂದ್ರಬಾಬು ನಾಯ್ಡು ಒಪ್ಪಿಗೆ ಸೂಚಿಸುವ ಸಾಧ್ಯತೆಯೂ ಇದೆ.

ಸೋಮಣ್ಣ ಪುತ್ರನ ಮೇಲೆ ಎಫ್‌ಐಆರ್

ಅರುಣ್ ಸೋಮಣ್ಣ ವಿರುದ್ಧ ವಂಚನೆ, ಜೀವ ಬೆದರಿಕೆ ಆರೋಪ

ಬೆಂಗಳೂರು: ಅಚ್ಚರಿಯ ರೀತಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸಂಪುಟದಲ್ಲಿ ಸೇರ್ಪಡೆಯಾದ ಖುಷಿಯಲ್ಲಿರುವ ಕೇಂದ್ರ ಸಚಿವ ವಿ. ಸೋಮಣ್ಣ ಅವರಿಗೆ ಇದೀಗ ಶಾಕ್ ಎದುರಾಗಿದೆ. ಅಧಿಕಾರ ಸ್ವೀಕರಿಸಿದ ಎರಡನೇ ದಿನದಲ್ಲಿ ಪುತ್ರ ಅರುಣ್ ಸೋಮಣ್ಣ ವಿರುದ್ಧ ಗಂಭೀರ ಸ್ವರೂಪದ ಎಫ್‌ಐಆರ್ ದಾಖಲಾಗಿದೆ.

ಇವೆಂಟ್ ಮ್ಯಾನೇಜ್ಮೆಂಟ್ ಕಂಪನಿ ವ್ಯವಹಾರದಲ್ಲಿ ದಂಪತಿಗೆ ವಂಚನೆ, ಜೀವ ಬೆದರಿಕೆ ಹಾಕಿದ ಆರೋಪದಲ್ಲಿ ಅರುಣ್ ಸೋಮಣ್ಣ, ಜೀವನ್‌ಕುಮಾರ್ ಮತ್ತು ಪ್ರಮೋದ್‌ರಾವ್ ಎಂಬುವವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಬೆಂಗಳೂರಿನ ಸಂಜಯನಗರದ ಎಇಸಿಎಸ್ ನಿವಾಸಿ ತೃಪ್ತಿ ಹೆಗಡೆ ಎಂಬುವವರು ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. 37ನೇ ಹೆಚ್ಚುವರಿ ಚೀಫ್ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಆದೇಶದ ಮೇರೆಗೆ ಮೂವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

ದೂರುದಾರರಾದ ತೃಪ್ತಿ ಹಾಗೂ ಮಧ್ವರಾಜ್ ಇವೆಂಟ್ ಮ್ಯಾನೇಜ್ಮೆಂಟ್ ಕಂಪನಿ ನಡೆಸುತ್ತಿದ್ದರು. 2013ರಲ್ಲಿ ಸರಕಾರಿ ಕಾರ್ಯಕ್ರಮವೊಂದರಲ್ಲಿ ಮಧ್ವರಾಜ್‌ಗೆ ಅರುಣ್ ಸೋಮಣ್ಣ ಪರಿಚಯವಾಗಿತ್ತು. 2017ರಲ್ಲಿ ಅರುಣ್ ಸೋಮಣ್ಣ ಪುತ್ರಿಯ ಹುಟ್ಟುಹಬ್ಬ ಕಾರ್ಯಕ್ರಮವನ್ನೂ ಮಧ್ವರಾಜ್ ಒಡೆತನದ ಕಂಪನಿ ಆಯೋಜಿಸಿತ್ತು. ಇದರಿಂದ ಅರುಣ್ ಸೋಮಣ್ಣ ಮಧ್ವರಾಜ್ ಜತೆ ಉತ್ತಮ ಬಾಂಧವ್ಯ ಏರ್ಪಟ್ಟಿತ್ತು. ಅರುಣ್, ಮಧ್ವರಾಜ್ ಜಂಟಿಯಾಗಿ ನೈಬರ್‌ಹುಡ್ ಎಂಬ ಇವೆಂಟ್ ಮ್ಯಾನೇಜ್‌ಮೆಂಟ್ ಕಂಪನಿಯನ್ನು ಪಾಲುದಾರಿಕೆ ಮೇಲೆ ಆರಂಭಿಸಿದ್ದರು. ಆದ್ದರಿಂದ ಕಂಪನಿಯ ಹೂಡಿಕೆ, ಪಾವತಿ ಹಾಗೂ ಸಂಗ್ರಹಣೆಯ ಸಂಪೂರ್ಣ ಜವಾಬ್ದಾರಿಯನ್ನು ಅರುಣ್ ವಹಿಸಿಕೊಂಡಿದ್ದರು. ನಂತರ ಕೆಲ ತಿಂಗಳಲ್ಲಿ ಕಂಪನಿಯ ವ್ಯವಹಾರದಲ್ಲಿ ನಷ್ಟವಾಗಿತ್ತು. ಈ ಹಿನ್ನೆಲೆ ಮಧ್ವರಾಜ್‌ಗೆ ಕಂಪನಿಗೆ ರಾಜೀನಾಮೆ ನೀಡಲು ಒತ್ತಾಯಿಸಿ ಕಿರುಕುಳ, ಕುಟುಂಬಕ್ಕೆ ಬೆದರಿಕೆ ಹಾಕಿರುವ ಆರೋಪ ಅರುಣ್ ಸೋಮಣ್ಣ ವಿರುದ್ಧ ಕೇಳಿಬಂದಿದೆ.

- ಇವೆಂಟ್ ಮ್ಯಾನೇಜ್ಮೆಂಟ್ ಕಂಪನಿ ವ್ಯವಹಾರದಲ್ಲಿ ದಂಪತಿಗೆ ವಂಚನೆ, ಜೀವ ಬೆದರಿಕೆ ಹಾಕಿದ ಆರೋಪ
- ಮೂವರ ವಿರುದ್ಧ ಎಫ್ ಐಆರ್ ದಾಖಲು

ನೀಟ್ ಯುಜಿ ಪರೀಕ್ಷೆಯಲ್ಲಿ ಅಕ್ರಮ

ಕೇಂದ್ರಕ್ಕೆ ಸುಪ್ರೀಂ ಕೋರ್ಟ್ ನೋಟಿಸ್

ನವದೆಹಲಿ: ನೀಟ್ ಯುಜಿ ಪರೀಕ್ಷೆಯಲ್ಲಿ ಅಕ್ರಮ ನಡೆದ ಆರೋಪದ ಹಿನ್ನೆಲೆಯಲ್ಲಿ ಸುಪ್ರೀಮ್ ಕೋರ್ಟ್ ಕೇಂದ್ರ ಮತ್ತು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ(ಎನ್‌ಟಿಎ)ಗೆ ಶುಕ್ರವಾರ ನೋಟಿಸ್ ನೀಡಿದೆ. ಅಕ್ರಮಗಳ ಬಗ್ಗೆ ಸಿಬಿಐ ತನಿಖೆ ನಡೆಸ ಬೇಕೆಂಬ ಅರ್ಜಿ ಹಿನ್ನೆಲೆಯಲ್ಲಿ ವರಿಷ್ಠ ಕೋರ್ಟ್ ಈ ಕ್ರಮ ಕೈಗೊಂಡಿದೆ. ಒಂದೇ ಕೇಂದ್ರದ 67 ವಿದ್ಯಾರ್ಥಿಗಳು 720ಕ್ಕೆ 720 ಅಂಕ ಪಡೆದ ಹಿನ್ನೆಲೆಯಲ್ಲಿ ಈ ಅಕ್ರಮ ದೂರು ಕೇಳಿಬಂದಿದೆ. ಹೀಗಾಗಿ ನೀಟ್ ಪರೀಕ್ಷೆಯ ಪಾವಿತ್ರ್ಯ ಹಾಳಾಗಿದೆ ಎಂದು ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿತ್ತು. ಇದರಿಂದ ಎಚ್ಚೆತ್ತುಕೊಂಡ ಕೇಂದ್ರ ಸರ್ಕಾರ, 1563 ವಿದ್ಯಾರ್ಥಿಗಳಿಗೆ ಜೂ.23ರಂದು ಮರುಪರೀಕ್ಷೆ ನಡೆಸುವುದಾಗಿ ನ್ಯಾಯಾಲಯದಲ್ಲಿ ಒಪ್ಪಿಕೊಂಡಿತ್ತು. ಈ ಪ್ರಕರಣದಲ್ಲಿ ಪ್ರಶ್ನೆಪತ್ರಿಕೆ ಸೋರಿಕೆಯಾಗಲೀ, ಅಕ್ರಮ ನಡೆದಿರುವುದಾಗಲಿ ಆಗಿಲ್ಲ ಎಂದು ಸಚಿವ ಧರ್ಮೇಂದ್ರ ಪ್ರಧಾನ್ ಸ್ಪಷ್ಟಪಡಿಸಿದ್ದರು.

ಸವಾಲು ಸ್ವೀಕರಿಸಿಲ್ಲ, ರಾಜೀನಾಮೆ ನೀಡಲ್ಲ: ಶಾಸಕ ಪ್ರದೀಪ್ ಈಶ್ವರ್

ಬೆಂಗಳೂರು: ಲೋಕಸಭಾ ಚುನಾವಣೆ ಸಮಯದಲ್ಲಿ ನಾನು ಹಾಕಿದ್ದ ಸವಾಲನ್ನು ಸುಧಾಕರ್ ಸ್ವೀಕರಿಸಿದ್ದರೆ, ರಾಜೀನಾಮೆ ನೀಡುತ್ತಿದ್ದೆ. ಆದರೆ ಅವರು ಸವಾಲನ್ನೇ ಸ್ವೀಕರಿಸದ ಕಾರಣ ರಾಜೀನಾಮೆ ನೀಡುವ ಅಗತ್ಯವಿಲ್ಲವೆಂದು ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ಸ್ಪಷ್ಟವಾಗಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸುಧಾಕರ್ ಅವರಿಗೆ ನಾನು ಹಾಕಿದ್ದ ಸವಾಲನ್ನು ಒಂದು ವೇಳೆ, ಸ್ವೀಕರಿಸಿದರೆ ಈಗಲೂ ನಾನು ರಾಜೀನಾಮೆ ನೀಡಲು ಸಿದ್ಧ. ಪ್ರಶ್ನೆಪತ್ರಿಕೆಯನ್ನೇ ಕೊಡದೆ ಉತ್ತರ ತಪ್ಪಾಗಿದೆ ಎಂದು ಆರೋಪಿಸುವುದು ಸರಿಯಲ್ಲ. ರಾಜಕೀಯದಲ್ಲಿ ಎಲ್ಲ ಕಡೆ ನಡೆಯುತ್ತಿರುತ್ತದೆ. ತಲೆಕೆಡಿಸಿಕೊಳ್ಳುವುದು ಬೇಡ. ಈ ಚುನಾವಣಾ ಅಖಾಡದಲ್ಲಿ ನಾನು ಇದ್ದಿದ್ದರೆ ಕಥೆಯೇ ಬೇರೆ ಇರುತ್ತಿತ್ತು. ಎಲ್ಲರೂ ಪ್ರದೀಪ್ ಈಶ್ವರ್ ಆಗಲು ಸಾಧ್ಯವಿಲ್ಲ. ಮುಂದಿನ ದಿನಗಳಲ್ಲಿ ಕಾರ್ಯಕರ್ತರೊಂದಿಗೆ ಮನೆಮನೆ ಸುತ್ತಿ ಕಾಂಗ್ರೆಸ್ ಪಕ್ಷ ಸಂಘಟಿಸುವೆ. ಇಲ್ಲಿ ವ್ಯಕ್ತಿಗಿಂತ ಪಕ್ಷ ಮುಖ್ಯ ಎಂದು ಅಭಿಪ್ರಾಯಪಟ್ಟರು.

ಕಾಂಗ್ರೆಸ್ ನನ್ನಂತಹ ಅಹಿಂದ ಹುಡುಗನಿಗೆ ಬೆನ್ನುಲುಬಾಗಿದೆ. ಹೀಗಾಗಿ ಈ ಸಿದ್ಧಾಂತ ನನಗೆ ಇಷ್ಟ. ಕಾಂಗ್ರೆಸ್ ಚುನಾವಣೆ ಕಾರಣಕ್ಕಾಗಿ ಗ್ಯಾರಂಟಿ ಯೋಜನೆಗಳನ್ನು ತಂದಿರಲಿಲ್ಲ. ನಮ್ಮ ಸರಕಾರ ಅವುಗಳನ್ನು ನಿಲ್ಲಿಸುವುದಿಲ್ಲ ಎಂಬ ವಿಶ್ವಾಸವಿದೆ. ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ನಮಗೆ ಸೋಲಾಗಿಲ್ಲ. ಬದಲಾಗಿ ಗೆಲುವು 5 ವರ್ಷ ಮುಂದೂಡಿಕೆಯಾಗಿದೆ. ಮುಂದೆ ಮತ್ತೆ ನಾವು ಗೆಲ್ಲುತ್ತೇವೆ. ಫಲಿತಾಂಶ ಪ್ರಕಟಗೊಂಡ ಬಳಿಕ ನಮ್ಮ ಮನೆಯ ಮೇಲೆ ಕಲ್ಲುತೂರಿದ ಆರೋಪಿಗಳಿಗೆ ನೋಟಿಸ್ ನೀಡಲಾಗಿದೆ. ಮೈಸೂರಿನ ಮೂವರು ಹುಡುಗರು ನಕಲಿ ರಾಜೀನಾಮೆ ಪತ್ರವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಟ್ಟಿರುವುದು ಪತ್ತೆಯಾಗಿದೆ. ಅವರ ಬಂಧನಕ್ಕೂ ಕಾರ್ಯಾಚರಣೆ ನಡೆಯುತ್ತದೆ ಪ್ರದೀಪ್ ಈಶ್ವರ್ ಎಚ್ಚರಿಕೆ ಕೊಟ್ಟರು.

- ಸವಾಲು ಸ್ವೀಕರಿಸಿದ್ದರೆ ರಾಜೀನಾಮೆ ನೀಡಲು ಈಗಲೂ ಸಿದ್ಧ
- ಅಖಾಡದಲ್ಲಿ ನಾನು ಇದಿದ್ದರೆ ಕಥೆಯೇ ಬೇರೆಯಾಗುತ್ತಿತ್ತು

ಕಳೆದ ಒಂದೂವರೆ ವರ್ಷದಿಂದಲೂ ನಾನು ಅತ್ಯಂತ ಸಹನೆಯಿಂದ ಇದ್ದೇನೆ. ನನ್ನ ಮನೆಯ ಮೇಲೆ ಕಲ್ಲುತೂರಾಟ ನಡೆಸಲಾಗಿದೆ, 4-5 ಕಡೆ ದಾಳಿಯಾಗಿದೆ. ಅದಕ್ಕೆಲ್ಲಾ ತಕ್ಷಣ ಪ್ರತಿಕ್ರಿಯಿಸಿದರೆ ಕಾಂಗ್ರೆಸ್ ಕಾರ್ಯಕರ್ತರು ರೊಚ್ಚಿಗೇಳುತ್ತಾರೆ, ಕಾನೂನು ಸುವ್ಯವಸ್ಥೆಗೆ ತೊಡಕಾಗುತ್ತದೆ ಎಂಬ ಕಾರಣಕ್ಕೆ ಸುಮ್ಮನಿದ್ದೇನೆ.

- ಪ್ರದೀಪ್ ಈಶ್ವರ್ ಶಾಸಕ

ಬಿಜೆಪಿಯಲ್ಲಿ ಖಾಲಿಯಾದ ವಿಭಾಗೀಯ ಸಂ. ಕಾರ್ಯದರ್ಶಿ!

ಬೆಂಗಳೂರು: ಬಿಜೆಪಿಗೆ 'ಸಂಘ'ಟನೆಯೇ ಶಕ್ತಿ. ಆದರೀಗ ಬೇರುಮಟ್ಟದಲ್ಲಿ ಪಕ್ಷವನ್ನು ಗಟ್ಟಿಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸುವ ವಿಭಾಗವಾರು ಸಂಘಟನಾ ಕಾರ್ಯದರ್ಶಿಗಳ ಸ್ಥಾನವೇ ಖಾಲಿಯಾಗಿರುವುದು ಇದೀಗ ಪಕ್ಷದಲ್ಲಿ ಭಾರಿ ಚರ್ಚೆಗೆ ನಾಂದಿಯಾಗಿದೆ.

ಲೋಕಸಭಾ ಚುನಾವಣೆ ಮುಗಿಯುತ್ತಿದ್ದಂತೆ ರಾಜ್ಯ ಸಂಘಟನಾ ಕಾರ್ಯದರ್ಶಿಯಾಗಿದ್ದ ಜಿ.ವಿ. ರಾಜೇಶ್ ಅವರನ್ನು ವಾಪಸು ಸಂಘಕ್ಕೆ ಕರೆಸಿಕೊಂಡಿದ್ದು ಅನೇಕರ ಅಚ್ಚರಿಗೆ ಕಾರಣವಾಗಿದೆ. ಇದರ ಬೆನ್ನಲ್ಲೇ ಇದೀಗ ರಾಜ್ಯದ ವಿಭಾಗವಾರು ಸಂಘಟನಾ ಕಾರ್ಯದರ್ಶಿಗಳನ್ನು ವಾಪಸು ಕರೆಸಿಕೊಂಡಿರುವ ನಡೆ ಅನೇಕರಿಗೆ ಅಚ್ಚರಿ ಮೂಡಿಸಿದೆ.

ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನದಿಂದ ನಳಿನ್‌ಕುಮಾರ್ ಕಟೀಲ್ ಕೆಳಗಿಳಿದ ದಿನದಿಂದಲೂ ಈ ಬಗ್ಗೆ ಚರ್ಚೆಗಳು ನಡೆದಿತ್ತು. ಆದರೆ ನೂತನ ನೇಮಕದೊಂದಿಗೆ ಈ ಹಿಂದಿನ ವಿಭಾಗವಾರು ಸಂಘಟನಾ ಕಾರ್ಯದರ್ಶಿಗಳನ್ನು ಹಿಂಪಡೆಯುವುದು ಸಂಪ್ರದಾಯ. ಆದರೆ ಇದೇ ಮೊದಲ ಬಾರಿ ಹಾಲಿ ಕಾರ್ಯದರ್ಶಿಗಳನ್ನು ವಾಪಸು ಆರ್‌ಎಸ್‌ಎಸ್‌ಗೆ ಕರೆಸಿಕೊಂಡರೂ, ಹೊಸ ನೇಮಕ ಪ್ರಕ್ರಿಯೆ ನಡೆದಿಲ್ಲ. ಸಂಘಟನಾ ಕಾರ್ಯದರ್ಶಿಗಳಿಲ್ಲದಿದ್ದರೆ, ಸ್ಥಳೀಯ ಮಟ್ಟದಲ್ಲಿ ಪಕ್ಷದ ಸಂಘಟನೆಯಲ್ಲಿ ಕೊಂಚ ಹಿನ್ನಡೆಯಾಗುತ್ತದೆ. ಆದ್ದರಿಂದ ಆದಷ್ಟು ಶೀಘ್ರ, ಈ ನೇಮಕ ಪ್ರಕ್ರಿಯೆ ನಡೆಯಬೇಕು ಎನ್ನುವ ಮಾತುಗಳು ಕೇಳಿಬರುತ್ತಿದೆ.

ಸಂಘಟನೆಗೆ ಸಮಸ್ಯೆ: ಮುಂದಿನ ದಿನದಲ್ಲಿ ಎದುರಾಗಲಿರುವ ಸ್ಥಳೀಯ ಸಂಸ್ಥೆ ಚುನಾವಣೆಗೆ ಕಾಂಗ್ರೆಸ್ ಈಗಾಗಲೇ ತಯಾರಿ ಆರಂಭಿಸಿದೆ. ಇನ್ನೊಂದು ವರ್ಷದ ಅವಧಿಯಲ್ಲಿ ಬಿಬಿಎಂಪಿ, ತಾಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಚುನಾವಣೆಗಳು ಎದರಾಗಲಿದೆ. ಈ ಸಮಯದಲ್ಲಿ ವಿಭಾಗವಾರು ಸಂಘಟನಾ ಕಾರ್ಯದರ್ಶಿಗಳು ಪ್ರಮುಖ ಪಾತ್ರನಿರ್ವಹಿಸುತ್ತಾರೆ.

ರಾಜ್ಯದಲ್ಲಿ ಸದ್ಯ ಸಂಘಟನಾ ಕಾರ್ಯದರ್ಶಿಯೂ ಇಲ್ಲದಿರುವಾಗ, ವಿಭಾಗವಾರು ಸಂಘಟನಾ ಕಾರ್ಯದರ್ಶಿಗಳನ್ನು ನೇಮಕ ಮಾಡದಿದ್ದರೆ, ಪಕ್ಷದ ಸಂಘಟನೆಗೆ ಹೊಡೆತ ಬೀಳುತ್ತದೆ ಎನ್ನುವುದು ಅನೇಕರ ಆತಂಕವಾಗಿದೆ. → 4

- ಬಿಜೆಪಿಯನ್ನು ತಳಮಟ್ಟದಲ್ಲಿ ಕಟ್ಟುವ ಪ್ರಮುಖ ಹುದ್ದೆ
- ವಾರ ಕಳೆದರೂ ವಿಭಾಗವಾರು ಸಂಘಟನಾ ಕಾರ್ಯದರ್ಶಿಗಳ ನೇಮಕವಿಲ್ಲ
- ಸದ್ಯ ರಾಜ್ಯದಲ್ಲಿ ಸಂಘಟನಾ ಕಾರ್ಯದರ್ಶಿಯೂ ಇಲ್ಲ, ವಿಭಾಗ ಕಾರ್ಯದರ್ಶಿಯೂ ಇಲ್ಲ

ಯಡಿಯೂರಪ್ಪ ಪರವಾಗಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಸಮರ್ಥನೆ

ಹುಬ್ಬಳ್ಳಿ: ಪೋಕ್ಸೊ ಪ್ರಕರಣದಲ್ಲಿ ಮಾಜಿ ಸಿಎಂ ಯಡಿಯೂರಪ್ಪ ಅವರನ್ನು ಬಂಧಿಸುವ ವಿಚಾರದಲ್ಲಿ, ಯಡಿಯೂರಪ್ಪ ಪರವಾಗಿ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಸಮರ್ಥನೆ ಮಾಡಿಕೊಂಡಿದ್ದಾರೆ. ಈ ಬಗ್ಗೆ ಫೇಸ್‌ಬುಕ್ ಪೇಜನಲ್ಲಿ ಬರೆದುಕೊಂಡಿರುವ ಪ್ರಹ್ಲಾದ ಜೋಶಿ ಅವರು ರಾಜ್ಯದ ಕಾಂಗ್ರೆಸ ಸರಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿ ಪೋಸ್ಟ್ ಮಾಡಿದ್ದಾರೆ.

ಲೋಕಸಭೆ ಚುನಾವಣೆ 2024ರಲ್ಲಿ ಸೋಲುಂಡ ಕಾಂಗ್ರೆಸ್ ಅದನ್ನು ಜೀರ್ಣಿಸಿಕೊಳ್ಳಲಾಗದೆ ಆಡಳಿತವನ್ನು ದುರುಪಯೋಗ ಮಾಡಿ ಮನಬಂದಂತೆ ಷಡ್ಯಂತ್ರ ಮಾಡುತ್ತಿದೆ. 'ಆಕೆ ಮಾನಸಿಕವಾಗಿ ಅಸ್ವಸ್ಥಳು, ದುರುದ್ದೇಶದಿಂದ ದೂರು ನೀಡಿದ್ದಾಳೆ. ಆಕೆ ಈಗಾಗಲೇ ಐಎಎಸ್, ಐಪಿಎಸ್ ಅಧಿಕಾರಿಗಳು ಸೇರಿದಂತೆ ರಾಜಕಾರಣಿಗಳ ಮೇಲೆ 60ಕ್ಕೂ ಹೆಚ್ಚು ಕೇಸ್ ಗಳನ್ನು ದಾಖಲಿಸಿದ್ದಾಳೆ' ಎಂದು ಅವರ ಗೃಹ ಮಂತ್ರಿಗಳೇ ಖುದ್ದಾಗಿ ಈ ಹಿಂದೆ ಹೇಳಿದ್ದರು.

ಈಗ ನಿಮ್ಮ ದುರಾಡಳಿತವನ್ನು ಮರೆಮಾಚಲಿಕ್ಕೆ 81 ವರ್ಷದ ಬಿಜೆಪಿ ವರಿಷ್ಠರಾದ ಯಡಿಯೂರಪ್ಪ ನವರ ಮೇಲೆ ಈ ಇಲ್ಲಸಲ್ಲದ ಪ್ರಕರಣ ಎಳೆಯುತ್ತಿರುವುದು ರಾಜಕೀಯ ವೈಷಮ್ಯವಷ್ಟೇ. ನಿಮ್ಮ ಈ ದುರ್ಬುದ್ಧಿಗೆ ನೀವು ತಕ್ಕ ಪಾಠ ಕಲಿಯಲಿದ್ದೀರಿ ಎಂದು ಕಾಂಗ್ರೆಸ ಸರಕಾರದ ವಿರುದ್ಧ ಕೇಂದ್ರ ಸಚಿವ ಜೋಶಿ ಅವರು ಸೋಷಿಯಲ್ ಮೀಡಿಯಾದಲ್ಲಿ ವಾಗ್ದಾಳಿ ಮಾಡಿದ್ದಾರೆ.

ನರೇಂದ್ರ ಮೋದಿಯವರು ಮೂರನೇ ಬಾರಿಗೆ ದೇಶದ ಪ್ರಧಾನಿಯಾಗಿದ್ದಕ್ಕೆ ಮತ್ತು ಸಂಸದರಾದ ಪ್ರಲ್ಹಾದ ಜೋಶಿಯವರು ಕೇಂದ್ರ ಸಚಿವರಾದ ಹಿನ್ನೆಲೆಯಲ್ಲಿ, ಹುಬ್ಬಳ್ಳಿ ಧಾರವಾಡ ಪೂರ್ವ ವಿಧಾನಸಭಾ ಕ್ಷೇತ್ರದ ಖಜಾಂಚಿ ಬಸವರಾಜ ಇಚ್ಚಂಗಿಯವರು ತಮ್ಮ ಬಡಿಗೇರ ಓಣಿಯ ಮನೆಯಿಂದ ಶ್ರೀಘಟಗಿ ಬಸವೇಶ್ವರ ದೇವಸ್ಥಾನದವರೆಗೆ ಉರುಳು ಸೇವೆ ನಡೆಸಿದರು.

ಬಿಲ್ಡರ್ಸ್‌ನವರಿಂದ ಕ್ರಯಪತ್ರ ಬರೆದು ಕೊಡಲು ಆಯೋಗ ಆದೇಶ

ಧಾರವಾಡ: ದಾವಣಗೆರೆಯ ನರಸಿಂಹ ಬಂಡಿವಾಡ ಅನ್ನುವವರು 2010ನೇ ಇಸವಿಯಲ್ಲಿ ಹುಬ್ಬಳ್ಳಿಯ ಗೋಲ್ಡನ್ ಹೋಮ್ಸ್ ಬಿಲ್ಡರ್ಸ್ ಕಡೆಯಿಂದ ರೂ.16 ಲಕ್ಷ ರೂಪಾಯಿಗಳಿಗೆ ಪ್ಲ್ಯಾಟ್ ನಂ.ಜಿ-104 ಖರೀದಿಸಿದ್ದರು. ಈ ಬಗ್ಗೆ ಉಭಯತರ ಮಧ್ಯೆ ಖರೀದಿ ಒಪ್ಪಂದ ಪತ್ರ ಆಗಿತ್ತು. ಪ್ಲ್ಯಾಟ್ ಕಟ್ಟಿಸಿ ಸ್ವಾಧೀನತೆ ಕೊಟ್ಟಿದ್ದರೂ ಸದರಿ ಬಿಲ್ಡರ್ಸ್ ದೂರುದಾರರಿಗೆ ನೋಂದಾಯಿತ ಕ್ರಯ ಪತ್ರ ಮಾಡಿಕೊಟ್ಟಿರಲಿಲ್ಲ. ಕ್ರಯಪತ್ರ ಬರೆದುಕೊಡುವಂತೆ ದೂರುದಾರ ಎದುರುದಾರ ಗೋಲ್ಡನ್ ಹೋಮ್ಸ್‌ರವರಿಗೆ ಹಲವು ಬಾರಿ ವಿನಂತಿಸಿದರೂ, ಅವರು ಕ್ರಯ ಪತ್ರ ಬರೆದುಕೊಟ್ಟಿರಲಿಲ್ಲ. ಅಂತಹ ಎದುರುದಾರ/ಗೋಲ್ಡನ್ ಹೋಮ್ಸ್ ಬಿಲ್ಡರ್ಸ್‌ರವರ ನಡಾವಳಿಕೆ ಗ್ರಾಹಕರ ರಕ್ಷಣಾ ಕಾಯ್ದೆ ಅಡಿ ಸೇವಾ ನ್ಯೂನತೆ ಆಗುತ್ತದೆ ಅಂತಾ ಹೇಳಿ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ದೂರುದಾರ ಧಾರವಾಡ ಜಿಲ್ಲಾ ಗ್ರಾಹಕರ ಆಯೋಗಕ್ಕೆ ಫೆ.26 ರಂದು ದಂಪತಿಗಳಿಬ್ಬರೂ ದೂರು ಸಲ್ಲಿಸಿದ್ದರು. ಸದರಿ ದೂರಿನ ಬಗ್ಗೆ ಕೂಲಂಕುಷವಾಗಿ ವಿಚಾರಣೆ ನಡೆಸಿದ ಆಯೋಗದ ಅಧ್ಯಕ್ಷ ಈಶಪ್ಪ. ಭೂತೆ ಹಾಗೂ ವಿಶಾಲಾಕ್ಷಿ ಬೋಳಶೆಟ್ಟಿ, ಪ್ರಭು. ಸಿ. ಹಿರೇಮಠ ದೂರುದಾರರಿಗೆ ನೋಂದಾಯಿತ ಕ್ರಯ ಪತ್ರ ಮಾಡಿಕೊಡುವಂತೆ ಆಯೋಗ ಎದುರುದಾರರಿಗೆ ನಿರ್ದೇಶಿಸಿದೆ.

ಸಮಾಚಾರ ಸಣ್ಣದಲ್ಲ

ಬಡ ಮಕ್ಕಳಿಗೆ ಉಚಿತ ನೋಟ್‌ಬುಕ್ ವಿತರಣೆ

ಧಾರವಾಡ: ಧಾರವಾಡ ತಾಲೂಕಿನ ಮುಗದ ಗ್ರಾಮದಲ್ಲಿ ಬಡ ಮಕ್ಕಳ ಶಿಕ್ಷಣಕ್ಕೆ ಬೇಕಾಗಿರುವ ಎಲ್ಲ ತರಹದ ಸಾಮಗ್ರಿಗಳನ್ನು ವಿತರಿಸಲಾಯಿತು. ಹತ್ತು ಬಡತನದ ಕುಟುಂಬದ ವಿದ್ಯಾರ್ಥಿಗಳನ್ನು ಗುರುತಿಸಿ, ಮಕ್ಕಳ ಶಿಕ್ಷಣಕ್ಕೆ ಬೇಕಾಗಿರುವ ಎಲ್ಲ ತರಹದ ಸಾಮಗ್ರಿಗಳನ್ನು ತಡಕೋಡ ಗ್ರಾಮ ಪಂಚಾಯತಿ ಉಪಾಧ್ಯಕ್ಷ ಈರಣ್ಣಾ ಬಾರಕೇರ ಹಸ್ತಾಂತರಿಸಿದರು. ಎಲ್ಲ ಮಕ್ಕಳಿಗೂ ಶಿಕ್ಷಣ ಸಿಗಬೇಕು ಅದೇ ನಮ್ಮ ಮುಖ್ಯ ಉದ್ದೇಶ ಎಂದು, ಈರಣ್ಣ ಬಾರಕೇರ ತಿಳಿಸಿದರು.

ತೆರಿಗೆ ಪಾವತಿಗೆ ಅವಕಾಶ ಶೇ.5 ರಷ್ಟು ರಿಯಾಯಿತಿ

ಹುಬ್ಬಳ್ಳಿ: ಪ್ರಸಕ್ತ ಆರ್ಥಿಕ ವರ್ಷ 2024-25 ನೇ ಸಾಲಿನ ಆಸ್ತಿ ತೆರಿಗೆಯನ್ನು ಸಂದಾಯಿಸಲು ಪ್ರತಿಶತ 5 ರಷ್ಟು ರಿಯಾಯಿತಿಯೊಂದಿಗೆ ಜುಲೈ 31 ರವರೆಗೆ ಅವಕಾಶ ಕಲ್ಪಿಸಲಾಗಿದೆ. ಸಾರ್ವಜನಿಕರು ಆಸ್ತಿ ತೆರಿಗೆಯನ್ನು 2024-25 ನೇ ಸಾಲಿನಲ್ಲಿ ಕೇವಲ ಹುಬ್ಬಳ್ಳಿ ಧಾರವಾಡ-1 (ಕರ್ನಾಟಕ ಒನ್) ಸೇವಾ ಕೇಂದ್ರಗಳ ಮುಖಾಂತರ ಅಥವಾ ಪರ್ಯಾಯ ವ್ಯವಸ್ಥೆಯಾಗಿ ಸಂದಾಯ ಮಾಡಲು http://www.hdmc.in ವೆಬ್ ಸೈಟ್‌ನಲ್ಲಿ ಎಲ್ಲ ವಿಧದ ಆನ್‌ಲೈನ್ ಪಾವತಿ ವ್ಯವಸ್ಥೆಗಳ ಮುಖಾಂತರ ಆಸ್ತಿಕರ ಸಂದಾಯ ಮಾಡಲು ಅವಕಾಶ ಕಲ್ಪಿಸಲಾಗಿದ್ದು, ಸಾರ್ವಜನಿಕರು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು. ಹೊಸದಾಗಿ ರಚನೆಯಾದ ಕಟ್ಟಡಗಳು, ವಾಣಿಜ್ಯ ಸಂಕೀರ್ಣಗಳು, ಕೈಗಾರಿಕಾ ಕಟ್ಟಡಗಳು ವಲಯ ಕಚೇರಿಗೆ ಪೂರಕ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿ, ಪಿಐಡಿ ಸೃಜನೆ ಮಾಡಿಕೊಂಡು ಆಸ್ತಿಕರ ಸಂದಾಯ ಮಾಡಬಹುದು. ಹಿಂದಿನ ವರ್ಷದ ಆಸ್ತಿ ತೆರಿಗೆ ಬಾಕಿ ಪಾವತಿಸದಿದ್ದವರೂ ಸಹ ತಮ್ಮ ಆಸ್ತಿ ತೆರಿಗೆಯನ್ನು ಕೂಡಲೇ ಪಾವತಿಸಿ ಪಾಲಿಕೆ ಕೈಗೊಳ್ಳಲಿರುವ ಅಭಿವೃದ್ಧಿ ಕಾರ್ಯಗಳಲ್ಲಿ ಜವಾಬ್ದಾರಿಯುತ ಪಾಲುದಾರರಾಗುವಂತೆ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಉಪ ಆಯುಕ್ತರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಮೃಗಶಿರಾ ಮಳೆಗೆ ಬೆಳೆ ನಾಶ

ನೂರಾರು ಹೆಕ್ಟೇರ್ ಪ್ರದೇಶದಲ್ಲಿ ಬೆಳೆದಿದ್ದ ಹೆಸರು, ಜೋಳ, ಹತ್ತಿ ಹಾನಿ

ಗಜೇಂದ್ರಗಡ: ತಾಲೂಕಿನಾದ್ಯಾಂತ ಬೆಂಬಿಡದೇ ಸುರಿಯುತ್ತಿರುವ ಮೃಗಶಿರ ಮಳೆಯ ಅಬ್ಬರಕ್ಕೆ ಜಮೀನುಗಳಲ್ಲಿ ನೀರು ನಿಂತು, ಬೆಳೆಯುವ ಹಂತದಲ್ಲಿದ್ದ ಹೆಸರು ಬೆಳೆ ಮಳೆಯ ಹೊಡೆತಕ್ಕೆ ಹಾನಿಯಾಗಿದ್ದು, ರೈತರು ಕಣ್ಣೀರು ಸುರಿಸುವಂತಾಗಿದೆ.

ಮೃಗಶಿರ ಮಳೆಯ ಆರ್ಭಟಕ್ಕೆ ಗಜೇಂದ್ರಗಡ ತಾಲೂಕಿನ ಸುತ್ತಲಿನ ಗ್ರಾಮಗಳ ನೂರಾರು ಹೆಕ್ಟೇರ್ ಪ್ರದೇಶದಲ್ಲಿ ಬೆಳೆದ ಹೆಸರು, ಗೋವಿನ ಜೋಳ, ಅಲಸಂದಿ, ಮತ್ತು ಹತ್ತಿ, ಮಳೆಗೆ ತುತ್ತಾಗಿವೆ. ಕಳೆದೊಂದು ತಿಂಗಳ ಹಿಂದೆ ಬಿತ್ತನೆ ಮಾಡಿದ್ದ ಬೆಳೆಗಳಿಗೆ ಇದೀಗ ಮೃಗಶೀರ ಮಳೆ ನರ್ತಕ್ಕೆ ಬೆಳೆಗಳು ಜಲಾವೃತಗೊಂಡಿವೆ. ಬೆಳೆದು ನಿಲ್ಲುವ ಹಂತದಲ್ಲಿಯೇ ಮಳೆಗೆ ಬೆಳೆಗಳು ಸಿಲುಕಿರುವುದು, ಕೈ ಬರುವ ತುತ್ತು ಮಳೆಗೆ ಕೊಚ್ಚಿ ಹೋಗಿವೆ ಎಂದು ಅನ್ನದಾತರು ಕಣ್ಣೀರು ಹಾಕುತ್ತಿದ್ದಾರೆ.

ಬಯಲು ಸೀಮೆ ಎಂದೇ ಖ್ಯಾತಿ ಪಡೆದ ತಾಲೂಕಿನಲ್ಲಿ ಮಳೆಯ ಆರ್ಭಟದಿಂದ ಮಲೆನಾಡಿನಂತಾಗಿದ್ದು, ಈ ಬಾರಿ ಮುಂಗಾರು ಹಂಗಾಮಿನಲ್ಲಿ ಹೆಸರು, ಗೋವಿನ ಜೋಳ ಸಾವಿರಾರು ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ. ಆದರೆ ಉತ್ತಮವಾಗಿ ಮಳೆ ಸುರಿದ ಪರಿಣಾಮ ಸಮೃದ್ಧವಾಗಿ ಬೆಳೆಯುವ ಹಂತದಲ್ಲಿಯೇ ವರುಣ ದೇವ ಅವಕೃಪೆ ತೋರಿದ ಪರಿಣಾಮ ಬೆಳೆಗಳು ಇದೀಗ ಹಾನಿಯಾಗುತ್ತಿರುವುದು ರೈತರು ಮತ್ತೆ ಸಂಕಷ್ಟಕ್ಕೆ ಸಿಲುಕುವಂತೆ ಮಾಡಿದೆ. ಕಳೆದ ಎರಡು ವರ್ಷಗಳಿಂದ ಹೇಳಿಕೊಳ್ಳುವಂತಹ ಮಳೆಯಾಗದ ಪರಿಣಾಮ ಬೆಳೆಗಳು ಅಷ್ಟಕಷ್ಟೇ ಇದ್ದವು. ಆದರೆ ಈ ಬಾರಿ ವಾಡಿಕೆಗಿಂತ ಹೆಚ್ಚು ಮಳೆ ಸುರಿಯುತ್ತಿರುವುದರಿಂದ ರೈತರು ಸಂತುಷ್ಟಗೊಂಡಿದ್ದರು. ಆದರೆ ಕಳೆದೊಂದು ವಾರದಿಂದ ಎಡೆಬಿಡದೇ ಸುರಿಯುತ್ತಿರುವ ಮಳೆಯ ಆರ್ಭಟದಿಂದ ರೈತನ ಕೈ ಹಿಡಿಯಬೇಕಿದ್ದ ಬೆಳೆಗಳು ಮಳೆಯಲ್ಲಿ ತೇಲುವಂತಾಗಿದೆ ಎಂದು ರೈತರು ಅಸಹಾಯಕತೆ ವ್ಯಕ್ತಪಡಿಸುತ್ತಿದ್ದಾರೆ.

ಪ್ರಸಕ್ತ ಮುಂಗಾರು ಸಂದರ್ಭದಲ್ಲಿ ಹತ್ತು ಹಲವಾರು ನಿರೀಕ್ಷೆ ಹೊತ್ತು ಕೊಂಡು ಮುಂಗಾರು ಕೃಷಿ ಚಟುವಟಿಕೆ ಮಾಡಿದ್ದರು. ಅದರಂತೆಯೇ ಈ ಬಾರಿ ಉತ್ತಮ ಪ್ರಮಾಣದಲ್ಲಿ ಹೆಸರು ಬೆಳೆ ಬಿತ್ತನೆಯಾಗಿದೆ. ಆದರೆ ರೈತರ ಕನಸು ಮಳೆ ನೀರಿನಲ್ಲಿ ಕೊಚ್ಚಿ ಹೋದಂತಾಗಿದೆ. ಹೊಲಗಳಲ್ಲಿ ಹೆಚ್ಚಿನ ಪ್ರಮಾಣದ ಮಳೆ ನೀರು ಸಂಗ್ರಹವಾಗಿದೆ. ಅತಿಯಾದ ಮಳೆಗೆ ಇಡೀ ಜಮೀನನಲ್ಲಿ ತೇವಾಂಶ ಹೆಚ್ಚಾಗುವುದಲ್ಲದೇ, ಬೆಳೆಗಳಿಗೆ ರೋಗ ರುಜಿಗಳು ಕಾಡುವಂತಾಗಿವೆ. ಕೂಡಲೇ ಸಂಬಂಧ ಪಟ್ಟ ಇಲಾಖೆ ಅಧಿಕಾರಿಗಳು ಹಾನಿಗೀಡಾದ ಪ್ರದೇಶಗಳಿಗೆ ಭೇಟಿ ನೀಡಿ, ರೈತರ ಸಮಸ್ಯೆ ನಿವಾರಣೆಗೆ ಕ್ರಮ ಕೈಗೊಳ್ಳಬೇಕು ಎನ್ನುವುದು ರೈತಪರ ಹೋರಾಟಗಾರರ ಒತ್ತಾಸೆಯಾಗಿದೆ.

ಗಜೇಂದ್ರಗಡ ಸಮೀಪದ ದಿಂಡೂರ ಗ್ರಾಮ ಬಳಿ ಜಮೀನಿನಲ್ಲಿನ ಹೆಸರು ಬೆಳೆ ಮಳೆಯ ಆರ್ಭಟಕ್ಕೆ ಸಂಪೂರ್ಣ ಜಲಾವೃತಗೊಂಡಿದೆ.

ನಾಲ್ಕು ಎಕರೆ ಜಮೀನಿನಲ್ಲಿ ಕಳೆದ 22 ದಿನಗಳ ಹಿಂದೆ ಹೆಸರು ಹೆಸರು ಬಿತ್ತನೆ ಮಾಡಿನ್ರಿ, ಈ ವರ್ಷ ಮಳಿಯಪ್ಪ ಕೈ ಹಿಡಿತಾನ ಅನ್ನೋ ನಂಬಿಕಿ ಹುಟ್ಟಿತ್ರಿ, ಆದ್ರ ಬೆಂಬಿಡದಂಗ್ ಸುರಿದ ಮಳಿಗೆ ಚೋಲೊ ಬೆಳೆದ ನಿಂತಿದ್ದ ಹೆಸರು ಬೆಳಿಗೆ ಮಳಿ ನೀರು ತುಂಬಿಕೊಂಡು ಸಂಪೂರ್ಣ ಹಾನಿಯಾಗೈತ್ರಿ, ರೈತರ ನೆರವಿಗೆ ಸರ್ಕಾರ ಬರಬೇಕ್ರಿ.

-ರಾಮಪ್ಪ ಮಲ್ಲಪ್ಪ ಮೇಟಿ
ದಿಂಡೂರ ಗ್ರಾಮದ ರೈತ

ಪಂಡಿತ ರಾಜೀವ ಸಂಗೀತ ಲೋಕದ ಮಾಂತ್ರಿಕ: ವೆಂಕಟೇಶ

ಧಾರವಾಡ: ದಿ.ಪಂಡಿತ ರಾಜೀವ್ ತಾರಾನಾಥರು ನಮ್ಮ ದೇಶದ ಶ್ರೇಷ್ಠ ಸಂಗೀತಗಾರರು. ಸ್ಪಷ್ಟವಾದಿ, ನೇರ ನಿಷ್ಠುರ ರಾಗಿದ್ದ ರಾಜೀವ್ ಅವರು ಅತ್ಯುತ್ತಮ ಮಾನವತಾವಾದಿಯೂ ಆಗಿದ್ದರು. ಉಸ್ತಾದ ಅಲಿ ಅಕ್ಬರ್ ಖಾನ್ ಅವರಲ್ಲದೆ, ಅನೇಕ ಗುರುಗಳಿಂದ ಮತ್ತು ನಮ್ಮ ಗುರುಗಳಿಂದ ಸಹ ಮಾರ್ಗದರ್ಶನ ಪಡೆದಿದ್ದರು.

ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿರುವ ರಾಜೀವ್ ತಾರಾನಾಥರು ಮತ್ತೆ ಈ ಸಂಗೀತ ನಾಡಿನಲ್ಲಿ ಹುಟ್ಟಿಬರಲಿ ಎಂದು, ಪಂ. ಎಂ. ವೆಂಕಟೇಶ ಕುಮಾರ್ ಅವರು ಹೇಳಿದರು.

ಮೊನ್ನೆ ನಮ್ಮನ್ನಗಲಿದ ಹಿರಿಯ ಸರೋದ್ ಕಲಾವಿದರಾದ ಪಂ. ರಾಜೀವ್ ತಾರಾನಾಥರಿಗೆ ಧಾರವಾಡದ ಮನೋಹರ ಗ್ರಂಥಮಾಲೆ ಅಟ್ಟದಲ್ಲಿ ಏರ್ಪಡಿಸಿದ್ದ, ನುಡಿ ನಮನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾಡಿಗೆ ಅವರ ಅಗಲಿಕೆ ತುಂಬಲಾರದ ನಷ್ಟ ಎಂದರು.

ಹಿರಿಯ ಲೇಖಕ ಜಿ.ಸಿ.ತಲ್ಲೂರ ಅವರು ಮಾತನಾಡಿ, ಇಂತಹ ಕಲಾವಿದರು ಅಪರೂಪ. ಸಂಗೀತ ಎಲ್ಲರ ಮನಸ್ಸು ತಟ್ಟಬೇಕು. ಸಂಗೀತದಲ್ಲಿ ಶುದ್ಧತೆ ಇದೆ. ಪ್ರಮಾಣ ಬದ್ಧತೆ ಇದೆ. ಸಂಸ್ಕೃತಿ, ಸಂಸ್ಕಾರ ಇದೆ.ಅದನ್ನು ಸಾಧಿಸಿ ತೋರಿಸಿದವರು ಪಂ.ರಾಜೀವ ತಾರನಾಥ ಎಂದು ಹೇಳಿದರು. ರಮಾಕಾಂತ ಜೋಶಿಯವರು ಮಾತನಾಡಿ,

ರಾಜೀವ್, ಜಿ ಬಿ ಜೋಶಿ ಮತ್ತು ಮನೋಹರ ಗ್ರಂಥಮಾಲೆ ನಂಟು ಆರು ದಶಕಗಳದು. ಪುನಃ ಪುನಃ ಬಂದು ಸಂತೋಷ ಪಡುತ್ತಿದ್ದರು. ಅವರೊಬ್ಬ ಶ್ರೇಷ್ಠ ವ್ಯಕ್ತಿ. ಎಲ್ಲದರಲ್ಲೂ ಶ್ರೇಷ್ಠ. ಅತ್ಯುತ್ತಮ ವಿಮರ್ಶಕರು ಆಗಿದ್ದ ಅವರು ಸಾಹಿತ್ಯದಿಂದ ತುಸು ವಿಮುಖರಾಗಿ ಪೂರ್ತಿಯಾಗಿ ಸಂಗೀತದತ್ತ ವಾಲಿ ಭಾರತದ ಶ್ರೇಷ್ಠ ಸರೋದ್ ವಾದಕರಲ್ಲಿ ಒಬ್ಬರಾದರು. ಅವರ ಅಗಲುವಿಕೆಯಿಂದ ಧಾರವಾಡಕ್ಕೆ, ವಿಶೇಷವಾಗಿ ಮನೋಹರ ಗ್ರಂಥಮಾಲೆಗೆ ಅಪಾರ ನಷ್ಟವಾಗಿದೆ ಎಂದು ಹೇಳಿದರು.

ಸಭೆಯಲ್ಲಿ ಉಪಸ್ಥಿತರಿದ್ದ ಶ್ಯಾಮಸುಂದರ ಬಿದರಕುಂದಿ, ವಿ ಟಿ ನಾಯಕ, ಶಂಕರ ಕುಂಬಿ, ಪ್ರಕಾಶ ಗರುಡ, ಶ್ರೀನಿವಾಸ ವಾಡಪಿಶ್ರ ಕೃಷ್ಣಾ ಕಟ್ಟಿ, ಶಶಿಧರ ನರೇಂದ್ರ, ಅರಣ್ಯ ಕುಮಾರ, ಜಯಂತ, ವೀರಣ್ಣ ಪತ್ತಾರ, ಸುಜಾತಾ ಗುರವ, ಮೊದಲಾದವರು ಮಾತನಾಡಿ ತಮ್ಮ ಗೌರವ ನಮನವನ್ನು ಸಲ್ಲಿಸಿದರು.

ಅಶೋಕ ಮೊಕಾಶಿ, ಸಮೀರ ಜೋಶಿ, ಸಾಧನಾ ಮಿರಜಕರ, ಎಸ್ ಎನ್ ದೇಶಪಾಂಡೆ, ವಿಶ್ವನಾಥ ಕೋಳಿವಾಡ ಮೊದಲಾದವರು ಉಪಸ್ಥಿತರಿದ್ದರು. ಹ ವೆಂ ಕಾಖಂಡಿಕಿ ಕಾರ್ಯಕ್ರಮ ನಿರ್ವಹಣೆ ಮಾಡಿದರು. ಒಂದು ನಿಮಿಷದ ಮೌನ ಆಚರಿಸಿ ಗೌರವ ಸಲ್ಲಿಸಲಾಯಿತು.

ಡೆಂಘೀ ಪ್ರಕರಣಗಳ ಪರಿಶೀಲನೆ

ಧಾರವಾಡ: ಧಾರವಾಡ ತಾಲೂಕಿನ ಮುಮ್ಮಿಗಟ್ಟಿ ಗ್ರಾಮದಲ್ಲಿ ಡೆಂಗ್ಯೂ ಶಂಕಿತ ಬಾಲಕಿ ಸಾವು ಪ್ರಕರಣ ಹಾಗೂ ಡೆಂಗ್ಯೂ ಶಂಕಿತ 7 ಪ್ರಕರಣಗಳ ಪತ್ತೆಯಿಂದಾಗಿ ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರ ನಿರ್ದೇಶನದ ಮೇರೆಗೆ, ಜಿಲ್ಲಾ ಆರೋಗ್ಯಾಧಿಕಾರಿ ಡಾ. ಶಶಿ ಪಾಟೀಲ ಮತ್ತು ಉಪವಿಭಾಗಾಧಿಕಾರಿ ಶಾಲಂ ಹುಸೇನ ಅವರು ಮುಮ್ಮಿಗಟ್ಟಿ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಡಿಎಚ್‌ಓ ಡಾ. ಶಶಿ ಪಾಟೀಲ ಹಾಗೂ ತಾಲೂಕು ವೈದ್ಯಾಧಿಕಾರಿ ಡಾ. ಕೆ.ಎನ್.ತನುಜಾ ಅವರ ನೇತೃತ್ವದ ಆಶಾ ಕಾರ್ಯಕರ್ತೆಯರ ತಂಡ ಗ್ರಾಮದಲ್ಲಿ ಹೆಚ್ಚು ಜ್ವರ ಪೀಡತರ ಓಣಿಗಳಿಗೆ ಭೇಟಿ ನೀಡಿ, ಮನೆಯಲ್ಲಿನ ಕುಟುಂಬದವರ ಅಭಿಪ್ರಾಯ ಸಂಗ್ರಹಿಸಿತು.

CHANGE OF NAME

I, **ABDULWAHAB DODWAD** (Old Name) R/o Plot No: 57, 1st Cross, Chalukyalayout, Lakamanhalli, Dharwad-580001 have changed my name to **ABDULWAHAB URF MUSTAQIM DODWAD** (New Name) vide affidavit sworn before S.H.Kantanavar. Notary Public, Dharwad on 14-06-2024.

ಡೆಂಘೀ ನಿಯಂತ್ರಣಕ್ಕೆ ಮುಂಜಾಗ್ರತೆ ವಹಿಸಿ

ಸೂಕ್ತ ಕ್ರಮ ವಹಿಸದ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವದಾಗಿ ಜಿಲ್ಲಾಧಿಕಾರಿ ದಿವ್ಯ ಪ್ರಭು ಎಚ್ಚರಿಕೆ

ಧಾರವಾಡ: ಜಿಲ್ಲೆಯಲ್ಲಿ ಡೆಂಘೀ, ಚಿಕನ್ ಗುನ್ಯಾ ಅಂತಹ ಕೀಟಜನ್ಯ ರೋಗಗಳು ಹೆಚ್ಚಳವಾಗದಂತೆ ನಗರ ಹಾಗೂ ಗ್ರಾಮೀಣ ಭಾಗದಲ್ಲಿ ವ್ಯಾಪಕವಾಗಿ ಸಾರ್ವಜನಿಕ ತಿಳುವಳಿಕೆ ಹಾಗೂ ಸಮೀಕ್ಷಾ ಕಾರ್ಯಗಳನ್ನು ಅಭಿಯಾನ ಮಾದರಿಯಲ್ಲಿ ಹಮ್ಮಿಕೊಳ್ಳಬೇಕು.

ಮುಂದಿನ 15 ದಿನಗಳಲ್ಲಿ ಡೆಂಗ್ಯೂ ಶಂಕಿತ ಪ್ರಕರಣಗಳು ಕಡಿಮೆ ಆಗಿ, ಜ್ವರಪೀಡಿತರ ಸಂಖ್ಯೆ ಇಳಿಮುಖವಾಗದಿದ್ದರೆ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಪಬ್ಲಿಕ್ ನೆಗ್ಲಿಜೆನಸಿ ಆ್ಯಕ್ಟ್ ಕೆಳಗೆ ಕ್ರಿಮಿನಲ್ ಕೇಸ್ ದಾಖಲಿಸುವದಾಗಿ ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಡೆಂಗ್ಯೂ ಶಂಕಿತ ಪ್ರಕರಣಗಳ ಪರಿಶೀಲನೆ ಹಾಗೂ ಆರೋಗ್ಯ, ಕಂದಾಯ, ಪಂಚಾಯತ ರಾಜ್ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರ ಸಭೆ ನಡೆಸಿ, ಮಾತನಾಡಿದ ಜಿಲ್ಲಾಧಿಕಾರಿ, ಸಕಾಲಕ್ಕೆ ಸಾರ್ವಜನಿಕರಿಗೆ ಸ್ಪಂದಿಸದೆ, ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ನಿಧಾನಗತಿಯಿಂದ ಯಾವುದೇ ಜೀವ ಹಾನಿ ಆದರೆ ನಿರ್ದಾಕ್ಷೀಣ್ಯವಾಗಿ ಕ್ರಮ ಜರುಗಿಸಲಾಗುತ್ತದೆ ಎಂದರು.

ತಂಡಗಳಾಗಿ ಶಂಕಿತ ಪ್ರಕರಣಗಳಿರುವ ಗ್ರಾಮಗಳಿಗೆ ಅಧಿಕಾರಿ, ಸಿಬ್ಬಂದಿಗಳು ಭೇಟಿ ನೀಡಿ, ಜನರಿಗೆ ರೋಗಗಳ ಬಗ್ಗೆ ಜಾಗೃತಿ ಮೂಡಿಸಬೇಕೆಂದರು.

ಜಿಲ್ಲಾ ಆರೋಗ್ಯ ಅಧಿಕಾರಿ ಪ್ರತಿ ದಿನ ಡೆಂಗ್ಯೂ ಪ್ರಕರಣಗಳ ಕುರಿತು ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಿಂದ ಮಾಹಿತಿ ಸಂಗ್ರಹಿಸಿ, ಜಿಲ್ಲಾಡಳಿತಕ್ಕೆ ಕಳುಹಿಸಬೇಕು. ಜಿಲ್ಲೆಯ ಗ್ರಾಮ ಪಂಚಾಯತವಾರು ಹಮ್ಮಿಕೊಳ್ಳುವ ಐಇಸಿ ಕಾರ್ಯಕ್ರಮಗಳ ಕುರಿತು ಪಟ್ಟಿ ತಯಾರಿಸಿ, ಸಲ್ಲಿಸಬೇಕು.

ಸಾರ್ವಜನಿಕರ ಆರೋಗ್ಯ ಕಾಪಾಡುವಲ್ಲಿ ಮತ್ತು ಕೀಟಜನ್ಯ ರೋಗಗಳ ನಿಯಂತ್ರಣದಲ್ಲಿ ಆರೋಗ್ಯ, ಕಂದಾಯ, ಪಂಚಾಯತ ರಾಜ್ ಮತ್ತು ನಗರ ಸ್ಥಳೀಯ ಸಂಸ್ಥೆಗಳು ಜಂಟಿಯಾಗಿ ನಿರ್ವಹಿಸಬೇಕೆಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ತಿಳಿಸಿದರು.

ಗ್ರಾಮದ ನೀರು ಸರಬರಾಜು ವೇಳೆಯನ್ನು ತಿಳಿದುಕೊಂಡು, ನೀರು ಸರಬರಾಜು ಆಗುವ 12 ಗಂಟೆ ಮೊದಲು ನೀರು ಸಂಗ್ರಹಿಸುವ ಪರಿಕರಗಳನ್ನು ಚನ್ನಾಗಿ ತೊಳೆದು, ಒಣ ಅರಿವೆಯಿಂದ ಒರಸಿ ಇಡಬೇಕು. 12 ತಾಸುಗಳ ನಂತರ ನೀರು ಬಂದ ಮೇಲೆ ಮತ್ತೇ ಅವುಗಳಲ್ಲಿ ನೀರು ತುಂಬಬೇಕು. ಅರ್ಧ ಬಳಸಿ, ಉಳಿದ ನೀರಿನಲ್ಲಿ ಮತ್ತೇ ನೀರು ತುಂಬಬಾರದು. ಮನೆ ಸುತ್ತ ನೀರು ನಿಲ್ಲದಂತೆ ಎಚ್ಚರಿಕೆ ವಹಿಸಬೇಕು. ಮನೆಯ ಸುತ್ತ ಯಾವುದೇ ರೀತಿಯ ತ್ಯಾಜ್ಯ ಸಂಗ್ರಹವಾಗದಂತೆ ನೋಡಿಕೊಳ್ಳಬೇಕು. ವಿಶೇಷವಾಗಿ ಮುಮ್ಮಿಗಟ್ಟಿ ಗ್ರಾಮದಲ್ಲಿ ಇರುವ ಸುಮಾರು 3,200 ಮನೆಗಳ ಸರ್ವೆ ಮಾಡಬೇಕು.

ಅಂದಾಜು 8 ಸಾವಿರ ಜನಸಂಖ್ಯೆಯನ್ನು ಸಮೀಕ್ಷೆಗೆ ಒಳಪಡಿಸಬೇಕು. ಆರೋಗ್ಯ ಇಲಾಖೆಯ ಕಾರ್ಯಕ್ರಮ ಅಧಿಕಾರಿಗಳು ಮತ್ತು ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿಗಳು ಜಂಟಿ ಆಗಿ ಸಮೀಕ್ಷೆ ಮತ್ತು ಐಇಸಿ ಕಾರ್ಯಕ್ರಮಗಳನ್ನು ಗ್ರಾಮದಲ್ಲಿ ಹಮ್ಮಿಕೊಳ್ಳಬೇಕೆಂದು ಜಿಲ್ಲಾಧಿಕಾರಿಗಳು ಹೇಳಿದರು. ಸಭೆಯಲ್ಲಿ ಜಿಲ್ಲಾ ಪಂಚಾಯತ ಉಪ ಕಾರ್ಯದರ್ಶಿ ಬಿ.ಎಸ್. ಮುಗನೂರಮಠ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಸಂಗಪ್ಪ ಗಾಬಿ, ಆರ್.ಸಿ.ಎಚ್.ಓ ಅಧಿಕಾರಿ ಡಾ.ಸುಜಾತಾ ಹಸವಿಮಠ, ಜಿಲ್ಲಾ ಸಮೀಕ್ಷಣಾಧಿಕಾರಿ ಡಾ. ಪರುಶರಾಮ ಎಫ್. ಕೆ., ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ರಮೇಶ ಬಿ., ತಹಸಿಲ್ದಾರ್ ಬಸವರಾಜ ಬೆಣ್ಣೆಶಿರೂರ, ಪ್ರಕಾಶ ನಾಶಿ, ಸುಧೀರ ಸಾಹುಕಾರ, ಯಲ್ಲಪ್ಪ ಗೋಣೆನ್ನವರ, ಡಾ.ಡಿ.ಎಚ್.ಹೂಗಾರ, ಮಲೇರಿಯಾ ಕಾರ್ಯಕ್ರಮ ಅಧಿಕಾರಿ ಡಾ. ಮಂಜುನಾಥ ಸೊಪ್ಪಿಮಠ, ದಾರವಾಡ ತಾಲೂಕು ಪಂಚಾಯತ ಇಓ ಗಂಗಾಧರ ಕಂದಕೂರ ಭಾಗವಹಿಸಿದ್ದರು.

ಮನೆಮನೆ ಸಮೀಕ್ಷೆ

ಧಾರವಾಡ ತಾಲೂಕಿನ ಹಲವು ಗ್ರಾಮಗಳಲ್ಲಿ ಮತ್ತು ಅವಳಿ ನಗರದ ಕೆಲವು ಶಹರ ಪ್ರದೇಶಗಳಲ್ಲಿ ಜ್ವರ ಪೀಡಿತರಿಂದಾಗಿ ಡೆಂಘೀ ಶಂಕಿತರ ಪ್ರಕರಣಗಳು ಹೆಚ್ಚಳವಾಗುತ್ತಿವೆ. ಅಧಿಕಾರಿಗಳು ಹೆಚ್ಚು ಮುಂಜಾಗ್ರತೆವಹಿಸಿ, ನಿಯಂತ್ರಣಕ್ಕೆ ಕ್ರಮ ವಹಿಸಬೇಕು. ಮುಮ್ಮಿಗಟ್ಟಿ, ನರೇಂದ್ರ, ಬೇಲೂರ, ಧಾರವಾಡ ನಗರದ ಆದರ್ಶ ನಗರ, ನೆಹರುನಗರ ಪ್ರದೇಶಗಳಲ್ಲಿ ಆರೋಗ್ಯ ಇಲಾಖೆ, ಆಶಾ ಕಾರ್ಯಕರ್ತೆಯರು ಹಾಗೂ ಪ್ಯಾರಾ ಮೆಡಿಕಲ್ ವಿದ್ಯಾರ್ಥಿಗಳಿಂದ ಮನೆ ಮನೆ ಸಮೀಕ್ಷೆ ಮಾಡಿ, ಆರೋಗ್ಯ ದಾಖಲಾತಿ ಮಾಡಬೇಕು. ಪ್ರತಿ ಮನೆಯಲ್ಲಿ ನೀರು ಸಂಗ್ರಹದ ಕುರಿತು ಕುಟುಂಬ ಸದಸ್ಯರಲ್ಲಿ ಜಾಗೃತಿ ಮೂಡಿಸಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಮಹಿಳಾ ಸುರಕ್ಷತೆ ಕುರಿತ ಅರಿವು ಸಂಪನ್ನ

ಧಾರವಾಡ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕವಿವಿ ವಿದ್ಯಾರ್ಥಿ ಕಲ್ಯಾಣ ವಿಭಾಗ, ಸ್ನಾತಕೋತ್ತರ ಕ್ರೀಡಾಕೂಟ ವಿಭಾಗ, ಮಹಿಳಾ ಸಂಶೋಧನಾ ಅಧ್ಯಯನ ಕೇಂದ್ರ, ಸ್ನಾತಕೋತ್ತರ ಸಮಾಜಕಾರ್ಯ ಅಧ್ಯಯನ ವಿಭಾಗಗಳ ಸಹಯೋಗದಲ್ಲಿ, ಕರ್ನಾಟಕ ವಿಶ್ವವಿದ್ಯಾಲಯ ಆವರಣದಲ್ಲಿ ಮಹಿಳಾ ಸುರಕ್ಷತೆ ಕುರಿತಂತೆ ಅರಿವು ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ., ಮಹಿಳೆಯರು ಮತ್ತು ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ಜೀವನದಲ್ಲಿ ತಂದೆ-ತಾಯಿಗಳಿಗೆ ಗೌರವ ತರುವಂತಹ ರೀತಿಯಲ್ಲಿ ನಡೆದುಕೊಳ್ಳಬೇಕೆಂದು ತಿಳಿಸಿದರು.

ಹಿರಿಯ ಸಿವ್ಹಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪಿ.ಎಫ್.ದೊಡ್ಡಮನಿ ಅವರು ಮಾತನಾಡಿ, ಮಹಿಳೆಯರು ಮತ್ತು ವಿದ್ಯಾರ್ಥಿಗಳು ಕಾನೂನಿನಲ್ಲಿ ಇರುವಂತಹ ಎಲ್ಲ ಸೌಲಭ್ಯಗಳನ್ನು ಪಡೆದುಕೊಂಡು ಜಾಗೃತಿ ಹೊಂದುವುದರ ಜೊತೆಗೆ ಸಮಾಜದ ಮುಖ್ಯವಾಹಿನಿಯಲ್ಲಿ ಜಾಗರೂಕತೆಯಿಂದ ಇರಬೇಕೆಂದು ಮತ್ತು ಎಲ್ಲ ಮಹಿಳೆಯರು ವಿದ್ಯಾರ್ಥಿಗಳು ಉಚಿತ ಕಾನೂನು ಸೇವಾ ಪ್ರಾಧಿಕಾರದ ಸದುಪಯೋಗ ಪಡೆದುಕೊಳ್ಳಬೇಕೆಂದು ತಿಳಿಸಿದರು.

ಹುಬ್ಬಳ್ಳಿ-ಧಾರವಾಡ ಉಪಪೊಲೀಸ್ ಆಯುಕ್ತರಾದ ರವೀಶ್ ಸಿ.ಆರ್ ಅವರು ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ದೂರವಾಣಿ, ಮೊಬೈಲ್, ಅಂತರ್ಜಾಲವನ್ನು ಶಿಕ್ಷಣಕ್ಕಾಗಿ ಸರಿಯಾದ ರೀತಿಯಲ್ಲಿ ಸದುಪಯೋಗ ಮಾಡಿಕೊಳ್ಳಬೇಕು. ಫೇಸ್ ಬುಕ್, ಇನ್‌ಸ್ಟಾಗ್ರಾಂ ನಂತಹ ಸಾಮಾಜಿಕ ಮಾಧ್ಯಮಗಳಿಂದ ದೂರವಿದ್ದು, ಪುಸ್ತಕಗಳನ್ನು ಓದುವುದರಿಂದ ಜ್ಞಾನ ವಿಸ್ತಾರವಾಗಿ ಜೀವನದಲ್ಲಿ ಗುರಿ ಸಾಧಿಸಲು ಸಾಧ್ಯವಾಗುತ್ತದೆ ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ಪದ್ಮಾವತಿ ಜಿ., ಅವರು ಮಾತನಾಡಿ, ವಿದ್ಯಾರ್ಥಿಗಳು, ತಮ್ಮ ವಿದ್ಯಾರ್ಥಿ ಜೀವನವನ್ನು ಸರಿಯಾಗಿ ರೂಪಿಸಿಕೊಂಡರೆ, ಮುಂದಿನ ದಿನಮಾನಗಳಲ್ಲಿ ಉನ್ನತ ಸ್ಥಾನ ಪಡೆದು ಸಾಧಕರಾಗಬಹುದು ಎಂದು ತಿಳಿಸಿದರು.

ಆರೋಗ್ಯಾಧಿಕಾರಿ ಡಾ.ಶಶಿ ಪಾಟೀಲ ಅವರು ಮಾತನಾಡಿ, ಈಗೀನ ದಿನಮಾನಗಳಲ್ಲಿ ಮಹಿಳೆಯರು ಮತ್ತು ವಿದ್ಯಾರ್ಥಿಗಳು ಜೀವನದಲ್ಲಿ ಮಾನಸಿಕ ಒತ್ತಡದಿಂದಾಗಿ ಆತ್ಮಹತ್ಯೆ ಅಂತಹ ಹೀನ ಕೃತ್ಯಗಳಿಗೆ ಒಳಗಾಗುತ್ತಿದ್ದಾರೆ.

ಅಂತಹ ಮಹಿಳೆಯರು ಮತ್ತು ವಿದ್ಯಾರ್ಥಿಗಳಿಗೆ ಆಪ್ತಸಮಾಲೋಚನೆ ಮಾಡಿ, ಮಾನಸಿಕ ಒತ್ತಡಿಂದ ದೂರವಿರಲು ನಮ್ಮ ಇಲಾಖೆಯಿಂದ ಟೆಲಿ ಮಾನಸಾ ಯೋಜನೆಯನ್ನು ಜಾರಿಗೊಳಿಸಲಾಗಿದೆ.

ಇದರ ಸದುಪಯೋಗಪಡೆದುಕೊಂಡು ಮಹಿಳೆಯರು ಮತ್ತು ವಿದ್ಯಾರ್ಥಿಗಳು ಜಾಗೃತಿ ಜೊತೆಗೆ ಆರೋಗ್ಯಕರ ಜೀವನಶೈಲಿ ತಮ್ಮದಾಗಿಸಿ ಕೊಳ್ಳಬೇಕೆಂದು ತಿಳಿಸಿದರು.

ಮಾನ್ಯ ಗೌರವನ್ವಿತ ಸಿವಿಲ್ ಜಡ್ಜ್ ಮತ್ತು ಜೆ.ಎಂ. ಎಫ್.ಸಿ ನ್ಯಾಯಾಲಯ ಹರಪನಹಳ್ಳಿ
ಕ್ರಿಮಿನಲ್ ಮಿಸಲೇನಿಯಸ್ ನಂ.248/2024

ಅರ್ಜಿದಾರರು: ಶ್ರೀಮತಿ ರೇಣುಕಾಮ್ಮ ಮತ್ತು ಇತರರು.

ವಿರುದ್ಧ

ಎದುರುದಾರರು: ಮಾನ್ಯ ಮುಖ್ಯಾಧಿಕಾರಿಗಳು ಜನನ ಮತ್ತು ಮರಣ ನೋಂದಣಿ ಅಧಿಕಾರಿಗಳು, ಪುರಸಭಾ ಕಾರ್ಯಾಲಯ, ಹರಪನಹಳ್ಳಿ.

ಸಾರ್ವಜನಿಕ ಪ್ರಕಟಣೆ

ಸದರಿ ಪ್ರಕರಣದಲ್ಲಿ (1) ಶ್ರೀಮತಿ ರೇಣುಕಮ್ಮ ಗಂಡ ಶಿವಾಜಿ ಕಲಾಲ್, ವಯಸ್ಸು 57 ವರ್ಷ, ವಾಸ: 10ನೇ ವಾರ್ಡ್ ಗೌಳೇರ ಓಣಿ, ಅಂಜನೇಯ ಬಡಾವಣೆ, ಹರಪನಹಳ್ಳಿ ತಾಲ್ಲೂಕು. ವಿಜಯನಗರ ಜಿಲ್ಲೆ, (2) ಶ್ರೀಮತಿ ಸುಜಾತಾ ಗಂಡ ರಾಮಿ, ವಯಸ್ಸು 40 ವರ್ಷ, ವಾಸ: ಹುಲಗೂರ ಗ್ರಾಮ, ಹಿಗ್ಗಾಂವ ತಾಲ್ಲೂಕು, ಹಾವೇರಿ ಜಿಲ್ಲೆ. (3) ಶ್ರೀ ಶಿವಾಜಿ ಕಲಾಲ್ ತಂದೆ ಶೇಷಪ್ಪ ಕಾಲಾಲ್, ವಯಸ್ಸು 68 ವರ್ಷ. (4) ಶ್ರೀ ಕೆ. ಪರಶಾರಮ ತಂದೆ ಶೇಷಪ್ಪ ಕಾಲಾಲ್, ವಯಸ್ಸು 45 ವರ್ಷ, 3 ಮತ್ತು 4ನೇ ಅರ್ಜಿದಾರರು 10ನೇ ವಾರ್ಡ್, ಹಡಗಲಿ ರಸ್ತೆ, ಆರ್.ಎಸ್.ಎನ್ ಶಾಲೆ ಹಿಂಭಾಗ, ಅಜನೇಯ ಬಡಾವಣೆ, ಹರಪನಹಳ್ಳಿ ತಾಲ್ಲೂಕು, ವಿಜಯನಗರ ಜಿಲ್ಲೆಯಲ್ಲಿ ವಾಸವಾಗಿರುತ್ತಾರೆ. 1ನೇ ಅರ್ಜಿದಾರಳು 2ನೇ ಅರ್ಜಿದಾರನ ಹೆಂಡತಿಯಾಗಿರುತ್ತಾರೆ, 2 ರಿಂದ 4ನೇ ಅರ್ಜಿದಾರರು ಪಾರ್ವತಮ್ಮ ಗಂಡ ಲೇಟ್ ಶೇಷಪ್ಪ ರವರ ಮಕ್ಕಳಗಿರುತ್ತರೆ. ಇವರುಗಳು ಅರ್ಜಿದಾರರಾಗಿದ್ದು, ಮತ್ತು ಮುಖ್ಯಧಿಕಾರಿಗಳು ಹಾಗೂ ಜನನ ಮತ್ತು ಮರಣ ನೋಂದಣಿ ಅಧಿಕಾರಿಗಳು, ಪುರಸಭಾ ಕಾರ್ಯಾಲಯ, ಹರಪನಹಳ್ಳಿ ಇವರು ಎದುರುದಾರರಾಗಿರುತ್ತಾರೆ. 1ನೇ ಅರ್ಜಿದಾರರ ಅತ್ತೆ ಮತ್ತು 2 ರಿಂದ 4ನೇ ಅರ್ಜಿದಾರರ ತಾಯಿಯಾದ ಪಾರ್ವತಮ್ಮ ಗಂಡ ಲೇಟ್ ಶೇಷಪ್ಪ ಇವರು ದಿನಾಂಕ:07-03-2016 ರಂದು ಹರಪನಹಳ್ಳಿ ವಾಸದ ಮನೆಯಲ್ಲಿ ಮರಣ ಹೊಂದಿದ್ದು, ಈಗ ಅರ್ಜಿದಾರಿಗೆ ವಂಶವೃಕ್ಷಕ್ಕಾಗಿ ಮತ್ತು ಇತರೆ ಸರ್ಕಾರಿ ಸೌಲಭ್ಯಕ್ಕಾಗಿ ಮೃತರ ಮರಣ ಪ್ರಮಾಣ ಪತ್ರದ ಅವಶ್ಯಕತೆ ಇರುವುದರಿಂದ ಸದರಿ ಪಾರ್ವತಮ್ಮ ಗಂಡ ಲೇಟ್ ಶೇಷಪ್ಪ ಇವರು ಮೇಲ್ಕಂಡ ದಿನಾಂಕದಂದು ಮರಣ ಹೊಂದಿದ ಬಗ್ಗೆ ಎದುರುದಾರರಿಂದ ಮರಣ ಪ್ರಮಾಣ ಪತ್ರದ ಆದೇಶ ಕೋರಿ ಅರ್ಜಿದಾರರು ಮಾನ್ಯ ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹರಪನಹಳ್ಳಿ ಜನನ ಮತ್ತು ಮರಣ ನೋಂದಣಿ ಕಾಯ್ದೆ ಕಲಂ.13(3) ಅಡಿಯಲ್ಲಿ ಪ್ರಕರಣವನ್ನು ದಾಖಲು ಮಾಡಿದ್ದು, ಈ ಪ್ರಕಾರಣವು ದಿನಾಂಕ: 20.07.2024 ರಂದು ಮಾನ್ಯ ಘನ ನ್ಯಾಯಾಲುವು ಮುದ್ಧತ್ತು ನಿಗಧಿ ಪಡಿಸಿರುತ್ತಾದೆ. ಸದರಿ ಪಾರ್ವತಮ್ಮ 9ತಮ್ಮ ಗಂಡ ಲೇಟ್ ಶೇಷಪ್ಪ ಇವರ ಮರಣ ಪ್ರಮಾಣ ಪತ್ರದ ವಿಚಾರದಲ್ಲಿ ಅರ್ಜಿದಾರರು ಮತ್ತು ಎದುರುದಾರರು ಹೊರತು ಪಡಿಸಿ ಇತರೇ ಯಾರಾದರೂ ತಕರಾರು ಸಲ್ಲಿಸಲು ಆಸಕ್ತಿ ಇದ್ದರೆ ಅಂತವರು ಮೇಲ್ಕಂಡ ಮುದ್ದತ್ತಿನ ದಿನಾಂಕದಂದು ಬೆಳಗ್ಗೆ 11.00 ಗಂಟೆಗೆ ಸದರಿ ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ಅವರ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರು ಸಲ್ಲಿಸಬಹುದು. ಇಲ್ಲವಾದಲ್ಲಿ ಯಾವ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಘನ ನ್ಯಾಯಾಲಯದಲ್ಲಿ ಏಕ ಪಕ್ಷಿಯಾವಾಗಿ ತೀರ್ಮಾನಿಸುತ್ತದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಹಿರಿಯ ಸಿವಿಲ್, ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹರಪನಹಳ್ಳಿ
ಅರ್ಜಿದಾರರ ಪರ ವಕೀಲರು.
ಕೆ.ಶಿವನಾಗ, ಸ್ಥಳ:- ಹರಪನಹಳ್ಳಿ

ಮಾನ್ಯ ಗೌರವನ್ವಿತ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಹರಪನಹಳ್ಳಿ
ಕ್ರಿಮಿನಲ್ ಮಿಸಿರೇನಿಯಸ್ ನಂ: 251/2024

ಅರ್ಜಿದಾರರು: ಶ್ರೀಮತಿ ರೇಣುಕಮ್ಮ ಮತ್ತು ಇತರರು.

ವಿರುದ್ಧ

ಎದುರುದಾರರು ಮಾನ್ಯ ಮುಖ್ಯಾಧಿಕಾರಿಗಳು ಹಾಗೂ ಜನನ ಮತ್ತು ಮರಣ ನೋಂದಣಿ ಅಧಿಕಾರಿಗಳು, ಪುರಸಭಾ ಕಾರ್ಯಾಲಯ, ಹರಪನಹಳ್ಳಿ.

ಸಾರ್ವಜನಿಕ ಪ್ರಕಟಣೆ

ಸದರಿ ಪ್ರಕರಣದಲ್ಲಿ 1. ಶ್ರೀಮತಿ ರೇಣುಕಮ್ಮ ಗಂಡ ಶಿವಾಜಿ ಕಲಾಲ್ ವಯಸ್ಸು 57 ವರ್ಷ, ವಾಸ: 10ನೇ ವಾರ್ಡ್ ಗೌಳ್ವೆರ ಓಣಿ ಆಂಜನೇಯ ಬಡಾವಣೆ , ಹರಪನಹಳ್ಳಿ ತಾಲೂಕು, ವಿಜಯನಗರ ಜಿಲ್ಲೆ, (2) ಶ್ರೀಮತಿ ಸುಜಾತಾ ಗಂಡ ರಾವಿ ವಯಸ್ಸು 40 ವರ್ಷ, ವಾಸ: ಹುಲಗೂರ ಗ್ರಾಮ,ಶಿಗ್ಗಾಂವ ತಾಲೂಕು, ಹಾವೇರಿ ಜಿಲ್ಲೆ . 3 ಶಿವಾಜಿ ಕಲಾಲ್ ತಂದೆ ಶೇಷಪ್ಪ ಕಾಲಾಲ್ ವಯಸ್ಸು 68 ವರ್ಷ. 4. ಶ್ರೀ ಕೆ .ಪರಶುರಾಮ ತಂದೆ ಶೇಷಪ್ಪ ಕಾಲಾಲ್ ವಯಸ್ಸು 45 ವರ್ಷ , 3 ಮತ್ತು 4 ನೇ ಅರ್ಜಿದಾರರು 10ನೇ ವಾರ್ಡ್ ಹಡಗಲಿ ರಸ್ತೆ, ಆರ್ ಎಸ್ ಎನ್ ಶಾಲೆಯ ಹಿಂಭಾಗ ಆಂಜನೇಯ ಬಡಾವಣೆ, ಹರಪನಹಳ್ಳಿ ತಾಲ್ಲೂಕು, ವಿಜಯನಗರ ಜಿಲ್ಲೆಯಲ್ಲಿ ವಾಸವಾಗಿರುತ್ತಾರೆ. 1ನೇ ಅರ್ಜಿದಾರಳು 2ನೇ ಅರ್ಜಿದಾರನ ಹೆಂಡತಿಯಾಗಿರುತ್ತಾರೆ. 2 ರಿಂದ 4ನೇ ಅರ್ಜಿದಾರರು ಪಾರ್ವತಮ್ಮ ಗಂಡ ಲೇಟ್ ಶೇಷಪ್ಪ ರವರ ಮಕ್ಕಳಗಿರುತ್ತರೆ. ಇವರುಗಳು ಅರ್ಜಿದಾರರಾಗಿದ್ದು, ಮತ್ತು ಮುಖ್ಯಾಧಿಕಾರಿಗಳು ಹಾಗೂ ಜನನ ಮತ್ತು ಮರಣ ನೋಂದಣಿ ಅಧಿಕಾರಿಗಳು, ಪುರಸಭಾ ಕಾರ್ಯಾಲಯ, ಹರಪನಹಳ್ಳಿ ಇವರು ಎದುರುದಾರರಾಗಿರುತ್ತಾರೆ. 1ನೇ ಅರ್ಜಿದಾರರ ಮಾವ ಮತ್ತು 2 ರಿಂದ 4ನೇ ಅರ್ಜಿದಾರರ ತಂದೆಯಾದ ಶೇಷಪ್ಪ ತಂದೆ ಲೇಟ್ ದೊಡ್ಡ ಬಾಳಪ್ಪ ಕಲಾಲ್ ಇವರು ದಿನಾಂಕ:07-09-196 ರಂದು ಹರಪನಹಳ್ಳಿ ವಾಸದ ಮನೆಯಲ್ಲಿ ಮರಣ ಹೊಂದಿದ್ದು, ಈಗ ಅರ್ಜಿದಾರರಿಗೆ ವಂಶವೃಕ್ಷಕ್ಕಾಗಿ ಮತ್ತು ಇತರೆ ಸರ್ಕಾರಿ ಸೌಲಭ್ಯಕ್ಕಾಗಿ ಮೃತರ ಮರಣ ಪ್ರಮಾಣ ಪತ್ರದ ಅವಶ್ಯಕತೆ ಇರುವುದರಿಂದ ಸದರಿ ಶೇಷಪ್ಪ ತಂದೆ ಲೇಟ್ ದೊಡ್ಡ ಬಾಳಪ್ಪ ಕಲಾಲ್ ಇವರು ಮೇಲ್ಕಂಡ ದಿನಾಂಕದಂದು ಮರಣ ಹೊಂದಿದ ಬಗ್ಗೆ ಎದುರುದಾರರಿಂದ ಮರಣ ಪ್ರಮಾಣ ಪತ್ರದ ಆದೇಶ ಕೋರಿ ಅರ್ಜಿದಾರರು ಮಾನ್ಯ ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹರಪನಹಳ್ಳಿ ಜನನ ಮತ್ತು ಮರಣ ನೋಂದಣಿ ಕಾಯ್ದೆ ಕಲಂ.13(3) ಅಡಿಯಲ್ಲಿ ಪ್ರಕರಣವನ್ನು ದಾಖಲು ಮಾಡಿದ್ದು, ಈ ಪ್ರಕಾರಣವು ದಿನಾಂಕ: 06.07.2024 ರಂದು ಮಾನ್ಯ ಘನ ನ್ಯಾಯಾಲುವು ಮುದ್ದತ್ತು ನಿಗಧಿ ಪಡಿಸಿರುತ್ತಾದೆ. ಸದರಿ ಶೇಷಪ್ಪ ತಂದೆ ಲೇಟ್ ದೊಡ್ಡ ಬಾಳಪ್ಪ ಕಲಾರ್ ಇವರ ಮರಣ ಪ್ರಮಾಣ ಪತ್ರದ ವಿಚಾರದಲ್ಲಿ ಅರ್ಜಿದಾರರು ಮತ್ತು ಎದುರುದಾರರು ಹೊರತು ಪಡಿಸಿ ಇತರೇ ಯಾರಾದರೂ ತಕರಾರು ಸಲ್ಲಿಸಲು ಆಸಕ್ತಿ ಇದ್ದರೆ ಅಂತವರು ಮೇಲ್ಕಂಡ ಮುದ್ದತ್ತಿನ ದಿನಾಂಕದಂದು ಬೆಳಗ್ಗೆ 11.00 ಗಂಟೆಗೆ ಸದರಿ ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ಅವರ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರು ಸಲ್ಲಿಸಬಹುದು. ಇಲ್ಲವಾದಲ್ಲಿ ಯಾವ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಘನ ನ್ಯಾಯಾಲಯದಲ್ಲಿ ಏಕ ಪಕ್ಷಿಯಾವಾಗಿ ತೀರ್ಮಾನಿಸುತ್ತದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಹಿರಿಯ ಸಿವಿಲ್, ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹರಪನಹಳ್ಳಿ
ಅರ್ಜಿದಾರರ ಪರ ವಕೀಲರು.
ಕೆ.ಶಿವನಾಗ, ಸ್ಥಳ:- ಹರಪನಹಳ್ಳಿ.

ಮಾನ್ಯ ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹರಪನಹಳ್ಳಿ
ಕ್ರಿಮಿನಲ್ ಮಿಸ್ ನಂ.83/2024

ಅರ್ಜಿದಾರರು : ಶ್ರೀ ಹೆಚ್.ಮೇಘರಾಜ ತಂದೆ ಲೇಟ್ ಸಣ್ಣ ಕೋಟೆಪ್ಪ , ವಯಸ್ಸು:55 ವರ್ಷ, ವೃತ್ತಿ ವ್ಯವಸಾಯ, ವಾಸ: ರಾಗಿಮಸಲವಾಡ ಗ್ರಾಮ, ಹರಪನಹಳ್ಳಿ, ತಾಲೂಕು, ವಿಜಯನಗರ ಜಿಲ್ಲೆ.

ವಿರುದ್ಧ

ಎದುರುದಾರರು: ಮಾನ್ಯ ತಹಶೀಲ್ದಾರರು ತಾಲೂಕು,ಕಛೇರಿ ಹರಪನಹಳ್ಳಿ ತಾಲೂಕು ವಿಜಯನಗರ ಜಿಲ್ಲೆ.

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಅರ್ಜಿದಾರನ ತಾಯಿಯಾದ ಶ್ರೀಮತಿ ನಾಗಮ್ಮ ಗಂಡ ಲೇಟ್ ಸಣ್ಣ ಕೋಟೆಪ್ಪ ಇವರು ದಿನಾಂಕ: 01.04.1970 ರಂದು ಹರಪನಹಳ್ಳಿ ತಾಲೂಕು ರಾಗಿಮಸಲವಾಡ ಗ್ರಾಮದ ಅರ್ಜಿದಾರನ ಸ್ವ -ಗೃಹದಲ್ಲಿ ಮರಣ ಹೊಂದಿದ್ದು , ಅವರ ಮರಣ ಪತ್ರ ಕೋರಿ ಹರಪನಹಳ್ಳಿ, ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲು ಮಾಡಿದ್ದು ಪ್ರಕಣದ ದಿನಾಂಕ: 05.07.2024 ರಂದು ಇರುತ್ತದೆ. ಆದ್ದರಿಂದ ಸದರಿ ಮೇಲ್ಕಂಡ ವಿಚಾರದಲ್ಲಿ ಸಂಬಂಧಪಟ್ಟ ಯಾರಾದರು ತಕರಾರು ಸಲ್ಲಿಸಲು ಆಸಕ್ತಿ ಇದ್ದರೆ.ಮೇಲ್ಕಂಡ ದಿನಾಂಕದಂದು ಬೆಳಗ್ಗೆ 11-00 ಗಂಟೆಗೆ ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ಅವರ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರು ಸಲ್ಲಿಸಬಹುದು. ಇಲ್ಲವಾದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಮಾನ್ಯ ಘನ ನ್ಯಾಯಾಲಯದಲ್ಲಿ, ಏಕ ಪಕ್ಷೀಯವಾಗಿ ತೀರ್ಮಾನಿಸಲಾಗುತ್ತದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಹಿರಿಯ ಸಿವಿಲ್, ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹರಪನಹಳ್ಳಿ
ಅರ್ಜಿದಾರನ ಪರ ವಕೀಲರು
ಶ್ರೀ ಜಿ.ಹಾಲೇಶ್. ದಿನಾಂಕ:14.06.2024

ಮಾನ್ಯ ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹರಪನಹಳ್ಳಿ
ಕ್ರಿಮಿನಲ್ ಮಿಸ್ ನಂ.303/2024

ಅರ್ಜಿದಾರಳ : .ಶ್ರೀಮತಿ ರತ್ನಮ್ಮ ಗಂಡ ಅಣ್ಣಪ್ಪನಾಯ್ಕ # 236 ಹುಲಿಕಟ್ಟೆ ದಾವಣಗೆರೆ, ತಾಲೂಕು ದಾವಣಗೆರೆ ಜಿಲ್ಲೆ. ಹಾಲಿವಾಸ ಶ್ರೀಮತಿ ರತ್ನಮ್ಮ ಗಂಡ ಅಣ್ಣಪ್ಪ @ಅಣ್ಣನಾಯ್ಕ ವಯಸ್ಸು 66 ವರ್ಷ, ವೃತ್ತಿ ಮನೆ ಕೆಲಸ , ವಾಸ ನಾಗತಿಕಟ್ಟಿ ತಾಂಡ, ಹರಪನಹಳ್ಳಿ ತಾಲೂಕು ವಿಜಯನಗರ ಜಿಲ್ಲೆ.

ವಿರುದ್ಧ

ಎದುರುದಾರರು : ಮಾನ್ಯ ತಹಶೀಲ್ದಾರವರ ಕಾರ್ಯಾಲಯ, ಹರಪನಹಳ್ಳಿ ಪಟ್ಟಣ ಹರಪನಹಳ್ಳಿ ತಾಲೂಕು, ವಿಜಯನಗರ ಜಿಲ್ಲೆ.

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಅರ್ಜಿದಾರಳ ಅಕ್ಕಳಾದ ಹೊನ್ನಿಬಾಯಿ ಗಂಡ ಓಂಕಾರನಾಯ್ಕ ಇವರು ದಿನಾಂಕ:25 -11-2012 ರಂದು ಹರಪನಹಳ್ಳಿ ತಾಲೂಕು ನಾಗತಿಕಟ್ಟಿ ತಾಂಡದ ತಮ್ಮ ಸ್ವ ಗೃಹದಲ್ಲಿ ಮರಣ ಹೊಂದಿದ್ದು, ಅವರ ಮರಣ ಪ್ರಮಾಣ ಪತ್ರ ಕೋರಿ ಹರಪನಹಳ್ಳಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲು ಮಾಡಿದ್ದು, ಪ್ರಕರಣವು ದಿನಾಂಕ 09.08.2024 ರಂದು ವಿಚಾರಣೆಗೆ ಇರುತ್ತದೆ. ಸದರಿ ಮೇಲ್ಕಂಡ ಪ್ರಕರಣವು ಬೆಳಗ್ಗೆ 11-00 ಗಂಟೆಗೆ ಈ ನ್ಯಾಯಾಲಯದ ಮುಂದೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರು ಸಲ್ಲಿಸಬಹುದು, ಇಲ್ಲವಾದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುತ್ತದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಮಾನ್ಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಹರಪನಹಳ್ಳಿ
ಅರ್ಜಿದಾರರ ಪರ ವಕೀಲರು
ಶ್ರೀನಾಗರಾಜ ನಾಯ್ಕ ಸಿ.
ಸ್ಥಳ: ಹರಪನಹಳ್ಳಿ ದಿನಾಂಕ: 14/06/2024

ಮಾನ್ಯ ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹರಪನಹಳ್ಳಿ
ಕ್ರಿಮಿನಲ್ ಮಿಸ್ ನಂ.119/2024

ಅರ್ಜಿದಾರರು : ಶ್ರೀ ದ್ಯಾಮಳ್ಳಿ ರಾಜಪ್ಪ ತಂದೆ ತಿರುಕಪ್ಪ ವಯಸ್ಸು:38 ವರ್ಷ, ವೃತ್ತಿ ವ್ಯವಸಾಯ, ವಾಸ: ಗರ್ಭಗುಡಿ ಗ್ರಾಮ, ಹರಪನಹಳ್ಳಿ, ತಾಲೂಕು, ವಿಜಯನಗರ ಜಿಲ್ಲೆ.

ವಿರುದ್ಧ

ಎದುರುದಾರರು: ಮಾನ್ಯ ತಹಶೀಲ್ದಾರರು ತಾಲೂಕು,ಕಛೇರಿ ಹರಪನಹಳ್ಳಿ ತಾಲೂಕು ವಿಜಯನಗರ ಜಿಲ್ಲೆ.

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಅರ್ಜಿದಾರನ ಅಜ್ಜಿಯಾದ ಹರವಿಕೆಂಚಮ್ಮ ಗಂಡ ಲೇಟ್ ರೇವಪ್ಪ ಇವರು ದಿನಾಂಕ: 19.09.2019 ರಂದು ಹರಪನಹಳ್ಳಿ ತಾಲೂಕು ಗರ್ಭಗುಡಿ ಗ್ರಾಮದ ಅರ್ಜಿದಾರನ ಸ್ವ -ಗೃಹದಲ್ಲಿ ಮರಣ ಹೊಂದಿದ್ದು , ಅವರ ಮರಣ ಪತ್ರ ಕೋರಿ ಹರಪನಹಳ್ಳಿ, ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲು ಮಾಡಿದ್ದು ಪ್ರಕಣದ ದಿನಾಂಕ: 04.07.2024 ರಂದು ಇರುತ್ತದೆ. ಆದ್ದರಿಂದ ಸದರಿ ಮೇಲ್ಕಂಡ ವಿಚಾರದಲ್ಲಿ ಸಂಬಂಧಪಟ್ಟ ಯಾರಾದರು ತಕರಾರು ಸಲ್ಲಿಸಲು ಆಸಕ್ತಿ ಇದ್ದರೆ.ಮೇಲ್ಕಂಡ ದಿನಾಂಕದಂದು ಬೆಳಗ್ಗೆ 11-00 ಗಂಟೆಗೆ ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ಅವರ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರು ಸಲ್ಲಿಸಬಹುದು. ಇಲ್ಲವಾದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಮಾನ್ಯ ಘನ ನ್ಯಾಯಾಲಯದಲ್ಲಿ, ಏಕ ಪಕ್ಷೀಯವಾಗಿ ತೀರ್ಮಾನಿಸಲಾಗುತ್ತದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಹಿರಿಯ ಸಿವಿಲ್, ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹರಪನಹಳ್ಳಿ
ಅರ್ಜಿದಾರನ ಪರ ವಕೀಲರು
ಶ್ರೀ ಜಿ.ಹಾಲೇಶ್. ದಿನಾಂಕ:14.06.2024

ಇನ್ನೆರಡು ತಿಂಗಳಲ್ಲಿ ಬಸ್ ನಿಲ್ದಾಣದ ಕಾಮಗಾರಿ ಪೂರ್ಣ: ಭೀಮಣ್ಣ

ಶಿರಸಿ : 6.30 ಕೋಟಿ ರು. ವೆಚ್ಚದಲ್ಲಿ ನಗರದಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಬಸ್ ನಿಲ್ದಾಣದ ಕಾಮಗಾರಿಯನ್ನು ಶಾಸಕ ಭೀಮಣ್ಣ ನಾಯ್ಕ ವೀಕ್ಷಣೆ ನಡೆಸಿದರು. ಮುಂದಿನ ಆಗಸ್ಟ್ 30 ರೊಳಗೆ ಕಾಮಗಾರಿ ಮುಗಿದು, ಶಿರಸಿ ಜನರಿಗೆ ನೂತನ ಬಸ್ ನಿಲ್ದಾಣದ ಸೇವೆ ಸಿಗಲಿದೆ ಎಂದು ತಿಳಿಸಿದರು.

ಶಿರಸಿಯ ಅಂಚೆ ವೃತ್ತದ ಬಳಿಯಿದ್ದ ಬಸ್ ನಿಲ್ದಾಣವನ್ನು ತೆರವುಗೊಳಿಸಿ ಕಳೆದ ಕೆಲ ವರ್ಷಗಳ ಹಿಂದೆ ಹೊಸ ಬಸ್ ನಿಲ್ದಾಣದ ಕಾಮಗಾರಿಗೆ ಚಾಲನೆ ನೀಡಲಾಗಿತ್ತು. ಕಾರಣಾಂತರಗಳಿಂದ ವಿಳಂಬವಾಗಿದ್ದ ಕೆಲಸ ಈಗ ಪುನಃ ವೇಗ ದೊರೆತಿದ್ದು, ಇದರಿಂದ ಶುಕ್ರವಾರ ಶಾಸಕರು ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿಯ ಗುಣಮಟ್ಟ ಪರಿಶೀಲನೆ ನಡೆಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಭೀಮಣ್ಣ, ಹಿಂದಿನ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಸಚಿವ ರಾಮಲಿಂಗ ರೆಡ್ಡಿ ಅವರು ಶಿರಸಿಯಲ್ಲಿ ನೂತನ ಬಸ್ ನಿಲ್ದಾಣಕ್ಕೆ ಅನುದಾನ ಒದಗಿಸಿಕೊಟ್ಟಿದ್ದರು. ಬಳಿಕ ಕಾರಣಾಂತರದಿಂದ ವಿಳಂಬವಾಗಿತ್ತು. ಆದರೆ ಈಗ ಜನರಿಗೆ ತೊಂದರೆಯಾಗುತ್ತಿರುವ ಕಾರಣ 2-3 ಬಾರಿ ವೀಕ್ಷಣೆ ಮಾಡಿ ಬೇಗ ಮುಗಿಸಲು ಸೂಚನೆ ನೀಡಲಾಗಿದೆ. ಇನ್ನು ಸ್ವಲ್ಪ ಕೆಲಸ ಉಳಿದಿದ್ದು, ಅ.30 ರೊಳಗೆ ಬಿಟ್ಟುಕೊಡುವುದಾಗಿ ಗುತ್ತಿಗೆದಾರರು ತಿಳಿಸಿದ್ದಾರೆ ಎಂದು ಮಾಹಿತಿ ನೀಡಿದರು.

ಹೊಸದಾಗಿ ನಿರ್ಮಾಣ ಆಗಿರುವ ಕಟ್ಟಡದಲ್ಲಿ ಉತ್ತಮ ಗುಣಮಟ್ಟದ ಕಾಮಗಾರಿಯಾಗಿದೆ. ಪ್ರಯಾಣಿಕರಿಗೆ ಎಲ್ಲಾ ಸೌಲಭ್ಯ ಒಳಗೊಂಡ ಬಸ್ ನಿಲ್ದಾಣ ಸಿಗಲಿದೆ ಎಂದ ಭೀಮಣ್ಣ, ಶಿರಸಿ ವಿಭಾಗಕ್ಕೆ ಹೊಸದಾಗಿ 45 ಬಸ್ಸುಗಳು ಬಂದಿದೆ. ಶಿರಸಿ ಘಟಕಕ್ಕೆ 10 ಬಸ್ಸುಗಳನ್ನು ನೀಡಲಾಗಿದೆ. ಇನ್ನೂ ಹೆಚ್ಚಿನ ಬಸ್ಸುಗಳಿಗೆ ಬೇಡಿಕೆ ಇಡಲಾಗಿದ್ದು, ಸಾರಿಗೆ ಸಚಿವರು ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದರು.

ಈ ಸಂದರ್ಭದಲ್ಲಿ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಜಗದೀಶ ಗೌಡ, ಸಾರಿಗೆ ಇಲಾಖೆಯ ಶಿರಸಿ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ, ಪ್ರಮುಖರಾದ ದೀಪಕ ದೊಡ್ಡೂರು, ಎಸ್.ಕೆ.ಭಾಗ್ವತ್, ಶ್ರೀನಿವಾಸ ನಾಯ್ಕ ಇತರರು ಇದ್ದರು. ಸಾರಿಗೆ ಇಲಾಖೆ ಅಧಿಕಾರಿಗಳು ಹಾಜಾರಿದ್ದರು.

> ಶಿರಸಿ ವಿಭಾಗಕ್ಕೆ ಹಾಗೂ ಘಟಕಕ್ಕೆ ಇನ್ನೂ ಹೆಚ್ಚಿನ ಬಸ್ಸುಗಳ ಬೇಡಿಕೆಯನ್ನು ಸಾರಿಗೆ ಸಚಿವರ ಬಳಿ ಇಡಲಾಗಿದೆ. ಶೀಘ್ರದಲ್ಲಿ ದೊರೆಯುವ ನಿರೀಕ್ಷೆಯಿದೆ. ಹೊಸ ಬಸ್ ನಿಲ್ದಾಣದಲ್ಲಿ ಗುಣಮಟ್ಟದ ಕಾಮಗಾರಿಯಾಗಿದ್ದು, ಜನರ ಸೇವೆಗೆ ಶೀಘ್ರ ಲಭ್ಯವಾಗಲಿದೆ.
> -ಭೀಮಣ್ಣ ನಾಯ್ಕ, ಶಾಸಕ

ಶಾಸಕರ ಭೇಟಿ

ಶಾಸಕ ಭೀಮಣ್ಣ ನಾಯ್ಕ ಬಸ್ ನಿಲ್ದಾಣದ ಬಳಿಕ ನೂತನವಾಗಿ ನಿರ್ಮಾಣ ಆಗುತ್ತಿರುವ ಇಂದಿರಾ ಕ್ಯಾಂಟೀನ್ ಗೆ ಭೇಟಿ ನೀಡಿ ಕಾಮಗಾರಿ ಪರಿಶೀಲಿಸಿದರು. ನಂತರ ಹೊಸದಾದ ಆರ್.ಟಿ.ಒ ಕಚೇರಿಗೆ ಭೇಟಿ ನೀಡಿ, ಗುಣಮಟ್ಟದ ಕೆಲಸ ಮಾಡಲು ಸೂಚನೆ ನೀಡಿದರು.

ಅಂಚೆ ಇಲಾಖೆಯಿಂದ ರಕ್ತದಾನ ಶಿಬಿರ

ಶಿರಸಿ: ವಿಶ್ವ ರಕ್ತ ದಾನಿಗಳ ದಿನದ ಅಂಗವಾಗಿ, ರಕ್ತ ದಾನದ ಅಗತ್ಯತೆಗಾಗಿ ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಶಿರಸಿ ಅಂಚೆ ವಿಭಾಗದ ವತಿಯಿಂದ ಜೂ.14 ರಂದು ವಿಶೇಷ ರಕ್ತ ದಾನ ಶಿಬಿರವನ್ನು ಪಂಡಿತ ಜನರಲ್ ಸರಕಾರಿ ಆಸ್ಪತ್ರೆಯಲ್ಲಿ ಏರ್ಪಡಿಸಲಾಗಿತ್ತು.

ಶಿರಸಿ ಅಂಚೆ ವಿಭಾಗದ ಅಧೀಕ್ಷಕ ಹೂವಪ್ಪ ಜಿ ಮತ್ತು ಉಪ ಅಂಚೆ ಅಧೀಕ್ಷಕ ವಿ. ವಿ. ನಿಂಬರಗಿ ಯವರು ರಕ್ತ ದಾನ ಮಾಡುವ ಮೂಲಕ ಶಿಬಿರಕ್ಕೆ ಚಾಲನೆ ನೀಡಿದರು. ಹಲವಾರು ಅಂಚೆ ಸಿಬ್ಬಂದಿ ಮತ್ತು ಜನ ಸಾಮಾನ್ಯರು ಕೂಡ ಶಿಬಿರದಲ್ಲಿ ಪಾಲ್ಗೊಂಡು ರಕ್ತ ದಾನ ಮಾಡಿ, ರಕ್ತ ದಾನ ಶ್ರೇಷ್ಠ ದಾನ ರಕ್ತ ದಾನ ಮಹಾ ದಾನ ಎಂಬುದನ್ನು ಸಾಬೀತು ಪಡಿಸಿದರು. ಸುಮನ್ ಹೆಗಡೆ, ವೈದ್ಯಕೀಯ ಅಧಿಕಾರಿ ಇವರು ಕೂಡ ಶಿಬಿರದಲ್ಲಿ ಪಾಲ್ಗೊಂಡು ರಕ್ತ ದಾನದ ಮಹತ್ವ ಮತ್ತು ರಕ್ತ ಸಂಗ್ರಹಿಸಿದ ನಂತರ ಅದನ್ನು ಬೇರ್ಪಡಿಸುವ ಪ್ರಕ್ರಿಯೆಯನ್ನು ವಿವರಿಸಿದರು.

ವಿದ್ಯುತ್ ತಂತಿ ಮೇಲೆ ಮರ ಬಿದ್ದು ಹಾನಿ

ಅಂಕೋಲಾ : ತಾಲೂಕಿನಲ್ಲಿ ಶುಕ್ರವಾರ ಬೆಳಿಗ್ಗೆ ಮಳೆ ಗಾಳಿ ರಭಸಕ್ಕೆ ಹೊನ್ನೆಬೈಲ್ ಗ್ರಾಮದ ಮರವೊಂದು ತಂತಿಯ ಮೇಲೆ ಬಿದ್ದು ಹಾನಿಯಾಗಿದೆ. ಅದೃಷ್ಟವಶಾತ್ ಅಲ್ಲಿ ಯಾರೂ ಇಲ್ಲದಿರುವುದರಿಂದ ಆಗಬಹುದಾದ ದೊಡ್ಡ ಅಪಾಯವೊಂದು ತಪ್ಪಿದಂತಾಗಿದೆ. ಸ್ಥಳೀಯ ಹೊನ್ನೆಬೈಲ್ ಗ್ರಾ.ಪಂ.ನವರು ಹೆಸ್ಕಾಂ ಇಲಾಖೆಗೆ ಮಾಹಿತಿ ನೀಡಿ ಗಿಡವನ್ನು ತೆರವುಗೊಳಿಸಿ ವಿದ್ಯುತ್ ಲೈನ್ ಅಳವಡಿಸಿದರು. ವಿದ್ಯುತ್ ತಂತಿಯ ಮೇಲೆ ಮರ ಬಿದ್ದಿರುವುದರಿಂದ ಕೆಲಕಾಲ ರಸ್ತೆ ಸಂಚಾರ ಸ್ಥಗಿತಗೊಂಡಿತು.

250 ಬೆಡ್ ಆಸ್ಪತ್ರೆ ನಿರ್ಮಾಣಕ್ಕೆ ಪಣ

ರಕ್ಷಾ ಸಮಿತಿ ಸಾಮಾನ್ಯ ಸಭೆಯಲ್ಲಿ ಸಚಿವರಿಂದ ಭರವಸೆ | ಆಸ್ಪತ್ರೆ ಸೇವೆಗೆ ಮೆಚ್ಚುಗೆ

ಭಟ್ಕಳ: ತಾಲೂಕಿನಲ್ಲಿ 250 ಬೆಡ್ ಆಸ್ಪತ್ರೆ ಮಾಡಲು ವರ್ಷಗಳಿಂದ ಹೋರಾಟ ಮಾಡುತ್ತಿದ್ದೇನೆ. ಆಗುವ ಭರವಸೆ ಇದೆ. ಇದು ಸಾಧ್ಯವಾದಲ್ಲಿ ಆಸ್ಪತ್ರೆ ಅಭಿವೃದ್ಧಿ ಆಗಲಿದೆ ಎಂದು ಸಚಿವ ಮಂಕಾಳ ವೈದ್ಯ ತಿಳಿಸಿದರು.

ಅವರು ತಾಲೂಕು ಆಸ್ಪತ್ರೆ ಸಭಾಗ್ರಹದಲ್ಲಿ ರಕ್ಷಾ ಸಮಿತಿ ಸಾಮಾನ್ಯ ಸಭೆ ನಡೆಸಿ ವೈದ್ಯರಿಂದ ಮಾಹಿತಿ ಪಡೆದರು.

ಆಸ್ಪತ್ರೆ ಮತ್ತು ವೈದ್ಯರ ಕಾರ್ಯದ ಮೆಚ್ಚುಗೆ ವ್ಯಕ್ತಪಡಿಸಿದ ಅವರು, ತೀರಾ ಬಡವರಿಗೆ ವೈಯಕ್ತಿಕವಾಗಿ ಏನಾದರು ಹಣದ ಸಮಸ್ಯೆ ಇದ್ದರೆ ನಾನು ನೀಡುತ್ತೇನೆ. ಹಾಲಿ ವೈದ್ಯರಿಂದ ಜನರೊಂದಿಗೆ ಉತ್ತಮ ಸ್ಪಂದನೆ ಇದೆ. ಇದು ಹೀಗೆ ಮುಂದುವರಿಯಲಿ ಎಂದರು.

ಮೊದಲು ತಾಲೂಕು ಆರೋಗ್ಯಾಧಿಕಾರಿ, ತಾಲೂಕಾಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ. ಸವಿತಾ ಕಾಮತ ಆಸ್ಪತ್ರೆಯ ಖರ್ಚು ವೆಚ್ಚಗಳ ವರದಿ ವಿವರಿಸಿದರು.

ಸರ್ಜನ್ ಡಾ. ಅರುಣ ಬೆಳ್ಳಿಗ್ಗೆ ಬಂದು ಓಟಿ ಮುಗಿಸಿ, ಸಂಜೆ 6 ಗಂಟೆಗೆ ಒಪಿಡಿಯಲ್ಲಿ ಕುಳಿತಿ ರಾತ್ರಿ ಒಂದು ಗಂಟೆಯ ತನಕ ರೋಗಿಗಳ ತಪಾಪಣೆ ಮಾಡುತ್ತಿದ್ದೆ. ಈ ಹಿನ್ನೆಲೆಯಲ್ಲಿ ಆಸ್ಪತ್ರೆಯಲ್ಲಿ ವಾರಕ್ಕೆ ಒಂದು ಅಥವಾ ಎರಡು ಬಾರಿ ಆಪರೇಶನ ಮಾಡಲು ಸಮಯ ನಿಗದಿ ಮಾಡಿ ಇನ್ನುಳಿದ ದಿನದಲ್ಲಿ ಒಪಿಡಿಯಲ್ಲಿ ಬೆಳ್ಳಿಗ್ಗೆಯಿಂದ ಸಂಜೆ ತನಕ ರೋಗಿಗಳ ತಪಾಸಣೆ ಮಾಡುವಂತೆ ತೀರ್ಮಾನ ತೆಗೆದುಕೊಂಡಿದ್ದೇನೆ.

ಸಚಿವರು ಇದಕ್ಕೆ ಅನುಮತಿ ನೀಡಿದರೆ ನಾನು ಇದನ್ನು ಜಾರಿಗೆ ತರುತ್ತೇನೆ ಎಂದ ಅವರು ಆಸ್ಪತ್ರೆಗೆ ಸೆಕ್ಯೂರಿಟಿ ಗಾರ್ಡ್ ಅವಶ್ಯಕತೆ ಇದೆ ಎಂದು ಸಚಿವರ ಬಳಿ ಕೇಳಿಕೊಂಡರು. ಇದಕ್ಕೆ ತಕ್ಷಣ ಡಿವೈಎಸ್‌ಗೆ ಕರೆ ಮಾಡಿದ ಸಚಿವ ಮಂಕಾಳ ವೈದ್ಯ ಸೂಕ್ತ ವ್ಯವಸ್ಥೆ ಮಾಡುವಂತೆ ಸೂಚಿಸಿದರು.

ಸಚಿವ ಮಂಕಾಳ ವೈದ್ಯ ಮಾತನಾಡಿ, ಈಗ ಇರುವ ಲ್ಯಾಬ್ ಟೆಕ್ನೀಷಿಯನ್‌ಗೆ 15 ಸಾವಿರ ಮಾಡಬೇಕೆಂಬ ಉದ್ದೇಶ ಇದೆ. ಇರುವ ವ್ಯವಸ್ಥೆಯನ್ನು ಸರಿಪಡಿಸಿ ಹೊಂದಿಸಿಕೊಂಡು ಹೋಗುವುದು ಉತ್ತಮ.

ಬದಲಿ ವ್ಯವಸ್ಥೆ ಮಾಡಿದರೆ ಎಲ್ಲವು ಸಮಸ್ಯೆ ಆಗಲಿದೆ. ಸದ್ಯ ಪ್ರತಿದಿನ ಓಟಿ ಸೌಲಭ್ಯ ಹೇಗೆ ನಡೆದುಕೊಂಡು ಬರುತ್ತಿದೆ ಅದೇ ರೀತಿ ಇರಲಿ. ಯಾವುದೇ ರೀತಿ ಬದಲಾವಣೆ ತರುವುದು ಬೇಡ ಎಂದು ವೈದ್ಯಾಧಿಕಾರಿಗಳಿಗೆ ತಿಳಿಸಿದರು.

ಬಳಿಕ ಸಮಾಜ ಸೇವಕ ಇರ್ಷಾದ್ ಲ್ಯಾಬ್ ಟೆಕ್ನೀಷಿಯನ್ ಆಸ್ಪತ್ರೆಯಲ್ಲಿ ರಕ್ತ ಪರೀಕ್ಷೆ ಮಾಡುವಂತೆ ಮಷಿನ್ ತರಿಸಬಹುದಲ್ಲವೇ ಎಂದು ಸಚಿವರಲ್ಲಿ ಮನವಿ ಮಾಡಿದರು. ಮತ್ತು ಡಾ.ಅರುಣ ಮಧ್ಯರಾತ್ರಿ 1-2 ತನಕ ಕೆಲಸ ಮಾಡುತ್ತಿದ್ದಾರೆ. ಆಸ್ಪತ್ರೆಗೆ ಒಳ್ಳೆ ಹೆಸರು ಒಂದು ಕೊಟ್ಟಿದ್ದಾರೆ. ಆದರೆ ಆಸ್ಪತ್ರೆಯ ಕೆಲವು ನರ್ಸ್‌ಗಳು ಉದ್ದೇಶ ಪೂರ್ವಕವಾಗ ಅವರ ಹೆಸರು ಹಾಳು ಮಾಡುತ್ತಿದ್ದಾರೆ.

ಇಂತಹ ನರ್ಸ್‌ಗಳಿಂದ ಸಮಸ್ಯೆ ಆಗುತ್ತಿದೆ ಎಂದು ಆರೋಪಿಸಿದರು. ನಂತರ ಸಚಿವ ಮಂಕಾಳ ವೈದ್ಯ ಆಸ್ಪತ್ರೆ ವಾರ್ಡ್ ಗಳಿಗೆ ಬೇಡಿ ನೀಡಿ ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ಡಾ. ಸತೀಶ ಕುಮಾರ, ಡಾ. ಲಕ್ಷ್ಮೀಶ ನಾಯ್ಕ, ತಾಲೂಕಾ ಆಸ್ಪತ್ರೆ ಸದಸ್ಯರಾದ ಶಾರದಾ ಈಶ್ವರ ನಾಯ್ಕ , ಸುಧಾಕರ ನಾಯ್ಕ ಮುಂತಾದವರು ಇದ್ದರು.

ಅವ್ಯವಹಾರದ ತನಿಖೆ ಶೀಘ್ರ ನಡೆಸಿ

ಶಿರಸಿ: ದಿ ತೋಟಗಾರ್ಸ್ ಕೋ ಆಪರೇಟಿವ್ ಸೇಲ್ ಸೊಸೈಟಿ ಲಿ., ಶಿರಸಿ (ಟಿಎಸ್.ಎಸ್) ಇದರಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ತನಿಖೆಯನ್ನು ಶೀಘ್ರದಲ್ಲಿ ನಡೆಸಬೇಕು ಎಂದು ಟಿಎಸ್‌ಎಸ್ ಹಾಲಿ ಆಡಳಿತ ಮಂಡಳಿಯಿಂದ ಡಿಎಸ್‌ಪಿ ಕೆ. ಎಲ್. ಗಣೇಶ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಯಿತು.

ಟಿಎಸ್‌ಎಸ್ ಸಂಸ್ಥೆಯ ಹಿಂದಿನ ಆಡಳಿತ ಮಂಡಳಿಯ ಅಧಿಕಾರ ಅವಧಿಯಲ್ಲಿ ಸಂಘದ ಪ್ರಧಾನ ವ್ಯವಸ್ಥಾಪಕ ರವೀಶ ಅಚ್ಯುತ ಹೆಗಡೆ ಹಾಗೂ ಇತರರು ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಕಲಂಗಳು ಹಾಗೂ ಸಂಘದ ನಿಯಮಾವಳಿಗೆ ವಿರುದ್ಧವಾಗಿ ನಡೆಸಿದ ಅವ್ಯವಹಾರಗಳ ಕುರಿತಂತೆ ಹಾಲಿ ಆಡಳಿತ ಮಂಡಳಿಯು ಲೆಕ್ಕ ಪರಿಶೋಧಕರಿಂದ ಮರು ಲೆಕ್ಕ ಪರಿಶೋಧನೆ ನಡೆಸುತ್ತಿದೆ.

ಇದರಲ್ಲಿ ಲೆಕ್ಕ ಪರಿಶೋಧಕರು ನೀಡಿದ ಮಧ್ಯಂತರ ವರದಿಯನ್ನು ಆಧರಿಸಿ ಸಂಘದ ಅವ್ಯಹಾರಗಳಲ್ಲಿ ಭಾಗಿಯಾದವರ ಮೇಲೆ ಶಿರಸಿ ಹೊಸ ಮಾರುಕಟ್ಟೆ ಪೊಲೀಸ್ ಠಾಣೆ ಶಿರಸಿ 6 ಕ್ರಿಮಿನಲ್ ಪ್ರಕರಣಗಳನ್ನು ಸಂಘದಿಂದ ದಾಖಲಿಸಲಾಗಿತ್ತು.

ಆದರೆ ಈ ಪ್ರಕರಣಗಳ ಕುರಿತು ತನಿಖೆಗಳು ಇನ್ನೂ ಪ್ರಾರಂಭವಾಗದೇ ಇರುವ ಹಿನ್ನೆಲೆಯಲ್ಲಿ ಶುಕ್ರವಾರ ನಗರದ ಡಿಎಸ್‌ಪಿ ಕಚೇರಿಗೆ ಭೇಟಿ ಮಾಡಿ ಈಗಾಗಲೇ ದಾಖಲಿಸಿದ 6 ಕ್ರಿಮಿನಲ್ ಪ್ರಕರಣಗಳ ಕುರಿತು ಶೀಘ್ರವಾಗಿ ತನಿಖೆ ಪ್ರಾರಂಭಿಸುವಂತೆ ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳಿಗೆ ಸೂಚಿಸುವಂತೆ ಸಂಘದ ಅಧ್ಯಕ್ಷ ಗೋಪಾಲಕೃಷ್ಣ ವೆಂಕಟ್ರಮಣ ವೈದ್ಯ ಮತ್ತಿಘಟ್ಟ ಅವರು ಮನವಿಯನ್ನು ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷ ಎಂ.ಎನ್.ಭಟ್ಟ ತೋಟಿಮನೆ ಹಾಗೂ ಇತರರು ಇದ್ದರು.

IIFL FINANCE
CIN: L67100MH1995PLC093797
Regd. Office: IIFL House, Sun Infotech Park, Road No. 16V, Plot No.B-23, Thane Industrial Area, Wagle Estate, Thane - 400604
Tel: (91-22) 41035000 • Fax: (91-22) 25806654
E-mail: reach@iifl.com • Website: www.iifl.com

ಚಿನ್ನದ ಆಭರಣಗಳ ಹರಾಜಿನ ಸಾರ್ವಜನಿಕ ಪ್ರಕಟಣೆ

ನಾವು, ಐಐಎಫ್‌ಎಲ್ ಫೈನಾನ್ಸ್ ಲಿಮಿಟೆಡ್ ("IIFL") ತಮ್ಮ ಸಾಲವನ್ನು ಕ್ರಮಬದ್ಧಗೊಳಿಸದ ಅಥವಾ ಬಾಕಿ ಇರುವ ಮೊತ್ತವನ್ನು ಪಾವತಿಸದ ಡೀಫಾಲ್ಟ್ ಮಾಡಿದ ಗ್ರಾಹಕರ ಚಿನ್ನದ ಆಭರಣಗಳನ್ನು ಹರಾಜು ಮಾಡುತ್ತಿದ್ದೇವೆ ಎಂದು ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ಈ ಮೂಲಕ ಎಲ್ಲಾ ಸಂಬಂಧಪಟ್ಟ ಸಾಲಗಾರರಿಗೆ ಸೂಚಿಸಲಾಗಿದೆ. ನೋಂದಾಯಿತ ಹರಾಜು ಸೂಚನೆಗಳು ಮತ್ತು ಪುನರಾವರ್ತಿತ ಜ್ಞಾಪನೆಗಳ ಮೂಲಕ ತಿಳಿಸಲಾಗಿದೆ. ಈ ಕೆಳಗಿನ ಸಾಲದ ಖಾತೆಗಳಲ್ಲಿ ಅಡಮಾನ ಇಟ್ಟಿರುವ ಚಿನ್ನದ ಆಭರಣಗಳ ಸಾರ್ವಜನಿಕ ಹರಾಜನ್ನು **ಇ-ಪ್ರೊಕ್ಯೂರ್ಮೆಂಟ್ ಟೆಕ್ನಾಲಜೀಸ್ ಲಿಮಿಟೆಡ್** ಮೂಲಕ ಆನ್ಲೈನ್ನಲ್ಲಿ ಅವರ ಆನ್ಲೈನ್ ಹರಾಜು ವೇದಿಕೆ **https://egold.auctiontiger.netನಲ್ಲಿ 18.06.2024 ರಂದು ಮಧ್ಯಾಹ್ನ 03:00 ರಿಂದ 05:00 ರವರೆಗೆ ನಡೆಸಲಾಗುತ್ತದೆ.** ಸ್ಥಳ ಅಥವಾ ದಿನಾಂಕದಲ್ಲಿನ ಬದಲಾವಣೆಯನ್ನು (ಯಾವುದಾದರೂ ಇದ್ದರೆ) ಹರಾಜು ವೇದಿಕೆ ಮತ್ತು/ಅಥವಾ ಹರಾಜು ಕೇಂದ್ರದಲ್ಲಿ ಪ್ರದರ್ಶಿಸಲಾಗುತ್ತದೆ. ಯಾವುದೇ ಕಾರಣಕ್ಕಾಗಿ ಇಲ್ಲಿ ತಿಳಿಸಲಾದ ದಿನಾಂಕದಂದು ಇ-ಹರಾಜು ನಡೆಯಲು ಸಾಧ್ಯವಾಗದಿದ್ದರೆ ಅಥವಾ ಅದೇ ದಿನದಂದು ಹರಾಜು ಪೂರ್ಣಗೊಳ್ಳದಿದ್ದರೆ, ಅದೇ ನಿಯಮಗಳು ಮತ್ತು ಷರತ್ತುಗಳ ಮೇಲೆ ಆಯಾ ಜಿಲ್ಲೆಯೊಳಗಿನ ಆಯಾ ತಾಲ್ಲೂಕುಗಳಲ್ಲಿ ಇರುವ ಹರಾಜು ವೇದಿಕೆ ಮತ್ತು/ಅಥವಾ ಹರಾಜು ಕೇಂದ್ರದಲ್ಲಿ ಯಾವುದೇ ನಂತರದ ದಿನಾಂಕದಂದು ಸದರಿ ಹರಾಜನ್ನು ನಡೆಸುವ ಅಥವಾ ಮುಂದುವರಿಸುವ ಹಕ್ಕನ್ನು ಐಐಎಫ್‌ಎಲ್ ಹೊಂದಿದೆ. ಉಳಿದಿರುವ ಬಾಕಿ ವಸ್ತುಗಳನ್ನು ಆಯಾ ಜಿಲ್ಲೆಯೊಳಗಿನ ಆಯಾ ತಾಲ್ಲೂಕುಗಳಲ್ಲಿರುವ ಹರಾಜು ವೇದಿಕೆ ಮತ್ತು/ಅಥವಾ ಹರಾಜು ಕೇಂದ್ರದಲ್ಲಿ ವಿವರಗಳನ್ನು ಪ್ರದರ್ಶಿಸಿದ ನಂತರ ಮುಂದಿನ ಕೆಲಸದ ದಿನಗಳಲ್ಲಿ ಹರಾಜು ಹಾಕಲಾಗುತ್ತದೆ. ಗ್ರಾಹಕರು ಮರಣಹೊಂದಿದರೆ, ಹರಾಜಿಗೆ ಸಂಬಂಧಿಸಿದ ಎಲ್ಲಾ ಷರತ್ತುಗಳು ನಾಮನಿರ್ದೇಶಿತ/ಕಾನೂನುಬದ್ಧ ಉತ್ತರಾಧಿಕಾರಿಗಳಿಗೆ ಅನ್ವಯವಾಗುತ್ತವೆ.

ಶಾಖೆಯ ಹೆಸರು: ಬಳ್ಳಾರಿ-ದುರ್ಗಾಂಬಾ ಟೆಂಪಲ್ ಜಿಎಲ್. ಚಿನ್ನದ ಸಾಲದ ಖಾತೆ ಸಂಖ್ಯೆ : GL28276893, GL28254216, GL28027771, GL20376809, GL26240517, GL21808812, GL24257523, GL28814350, GL27375975, GL27396261, GL24618219, GL27076870, GL27984202, GL26358028, GL27780459, GL27743181, GL27780450, GL27984109, GL26424463, GL27513381, GL23049687, GL28120924, GL27743169, GL27513333, GL27305257, GL27410506, GL26291892, GL28120917, GL26104168, GL29640376, GL29625365, GL27539310, GL27289945, GL27301675

ಶಾಖೆಯ ಹೆಸರು: ಬಳ್ಳಾರಿ-ದುರ್ಗಾಂಬಾ ಟೆಂಪಲ್ ಜಿಎಲ್. ಚಿನ್ನದ ಸಾಲದ ಖಾತೆ ಸಂಖ್ಯೆ : GL29203267, GL29182191, GL26813332, GL26803138, GL28468861, GL28044478, GL27964447, GL27950711, GL28740429, GL28979898, GL28966652, GL27839401, GL24343869, GL27531371, GL27500415, GL28603944, GL27659314, GL29449100, GL29439031, GL25442126, GL28807827, GL28806740, GL27262954, GL28650225, GL27697108, GL28670199, GL28601805, GL28165658, GL28361901, GL28614547, GL25139961, GL25352946, GL28608782, GL28377337, GL25689690, GL26637376, GL26913220

ಶಾಖೆಯ ಹೆಸರು: ಸಿರುಗುಪ್ಪ. ಚಿನ್ನದ ಸಾಲದ ಖಾತೆ ಸಂಖ್ಯೆ : GL26487110, GL28627020, GL27541909, GL27554144, GL28775127, GL23568864, GL27821593, GL25886921, GL27821741, GL27185026, GL26737349, GL26713534, GL26713923, GL32917295, GL26737280, GL28794557, GL28782546, GL28114237, GL27356304, GL28752835, GL28921078, GL26118836, GL27951796

ಶಾಖೆಯ ಹೆಸರು: ಹಗರಿಬೊಮ್ಮನಹಳ್ಳಿ ಜಿಎಲ್. ಚಿನ್ನದ ಸಾಲದ ಖಾತೆ ಸಂಖ್ಯೆ : GL26975429, GL28655660, GL28671205, GL30281114, GL26809123, GL32357649, GL26421877, GL26402985, GL28255637, GL26046210, GL28277739, GL28426535, GL28819514, GL28797867, GL28342107, GL28357104, GL26818485, GL26624666, GL26234974, GL27756961, GL24925737, GL26848352, GL26870551, GL32367302, GL26485693, GL29202649, GL29194778, GL20239357, GL28807351, GL28503675, GL28486883, GL24596535, GL29586948, GL29580105, GL28755040, GL28885200, GL26152330, GL28415740, GL27255229, GL27277782, GL26712698, GL25959886, GL27880067, GL26599287, GL27187891, GL29696625, GL29709336, GL26269653, GL27982871, GL28125308, GL20244953, GL29711222, GL28641802, GL28630272, GL27935857, GL26655096, GL27779212, GL27762608, GL25088444, GL24982369, GL27656672, GL24145667, GL30673356, GL27794890, GL19631336

ಶಾಖೆಯ ಹೆಸರು: ಹರಪನಹಳ್ಳಿ ಜಿಎಲ್. ಚಿನ್ನದ ಸಾಲದ ಖಾತೆ ಸಂಖ್ಯೆ : GL27851141, GL27945629, GL25668269, GL28751601

ಶಾಖೆಯ ಹೆಸರು: ಹೊಸಪೇಟೆ-ಕಾಲೇಜು ರಸ್ತೆ ಜಿಎಲ್. ಚಿನ್ನದ ಸಾಲದ ಖಾತೆ ಸಂಖ್ಯೆ : GL28745739, GL28801766

ಶಾಖೆಯ ಹೆಸರು: ಸಂಡೂರ್ ಜಿಎಲ್. ಚಿನ್ನದ ಸಾಲದ ಖಾತೆ ಸಂಖ್ಯೆ : GL28607124, GL28936692, GL28851221, GL30734887, GL24382804, GL27301163, GL27289466, GL28909006, GL28609247, GL29023764, GL29018957, GL29177678, GL29170046, GL29130805, GL29113226, GL24764494, GL28514020, GL28526928, GL28912339, GL28798871

ಶಾಖೆಯ ಹೆಸರು: ವಿಜಯನಗರ-ಕೊಟ್ಟೂರು ಜಿಎಲ್. ಚಿನ್ನದ ಸಾಲದ ಖಾತೆ ಸಂಖ್ಯೆ : GL29698509, GL29710998, GL28365469, GL29747188, GL29731479, GL29711822, GL26617192, GL29449573, GL29436016, GL28594427, GL26487108, GL27595901, GL28388834, GL28513216, GL29428171, GL29408484, GL29118153, GL29131483

ಶಾಖೆಯ ಹೆಸರು: ವಿಜಯನಗರ-ಕೂಡ್ಲಿಗಿ ಜಿಎಲ್. ಚಿನ್ನದ ಸಾಲದ ಖಾತೆ ಸಂಖ್ಯೆ : GL29459846, GL29478332, GL29553109, GL29570441, GL26373064, GL28707073, GL28684130, GL29333111, GL29301692, GL29450455, GL29429757, GL29502062, GL29487270, GL23806453, GL23834410, GL29131642, GL29119214, GL27778024, GL27767429, GL28797433, GL28915957, GL29466174, GL29476473, GL28652852, GL28934104, GL29204069, GL29187009, GL28847674, GL27655495, GL26699892, GL29335701, GL29354492, GL29257075, GL29279772, GL29404731, GL29385692, GL28261857, GL28229977, GL28852736, GL29502921, GL29485129, GL27283850, GL29593390, GL29616483, GL28934661

